# ಅಪೌಷ್ಟಿಕತೆ, ಸಾಧಾರಣ ಮಕ್ಕಳ ಮೇಲೆ ಪರಿಣಾಮ ಬೀರಿದ ಆಯುಷ್ ಔಷಧಿಗಳು

ದಾವಣಗೆರೆ, ನ.2- ಮಹಾಮಾರಿ ಕೊರೊನಾದ 3ನೇ ಅಲೆಯು ಮಕ್ಕಳ ಮೇಲೆ ಪರಿಣಾಮ ಬೀರಲಿದೆ ಎನ್ನುವ ತಜ್ಞರ ಅಭಿಪ್ರಾಯದ ಹಿನ್ನೆಲೆಯಲ್ಲಿ ಅದನ್ನು ಸಮರ್ಪಕವಾಗಿ ತಡೆಗಟ್ಟುವ ನಿಟ್ಟಿನಲ್ಲಿ ಆಯುಷ್ ಇಲಾಖೆಯಿಂದ ನೀಡಲಾಗಿದ್ದ ಔಷಧಿಗಳು ಜಿಲ್ಲೆಯಲ್ಲಿ ಅಪೌಷ್ಟಿಕತೆ ಮತ್ತು ಸಾಧಾರಣ ಮಕ್ಕಳ ಮೇಲೆ ಉತ್ತಮ ಪರಿಣಾಮ ಪ್ರಭಾವ ಬೀರಿವೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ವಿಜಯ್‌ಕುಮಾರ್ ಹರ್ಷ ವ್ಯಕ್ತಪಡಿಸಿದರು.

ಅವರು ನಗರದ ಪಿ.ಬಿ.ರಸ್ತೆಯಲ್ಲಿನ ಪಂಚಾಯತ್‌ರಾಜ್ ಇಲಾಖೆಯ ಕಾರ್ಯಪಾಲಕ ಅಭಿಯಂತರರ ವಿಭಾಗೀಯ ಕಚೇರಿ ಆವರಣದಲ್ಲಿ ಆಯುಷ್ ಇಲಾಖೆ ಬೆಂಗಳೂರು, ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತಿ ದಾವಣಗೆರೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರಿ ಆಯುಷ್ ವೈದ್ಯಾಧಿಕಾರಿಗಳ ಸಂಘ, ದಾವಣಗೆರೆ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ 6ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಕಾರ್ಯಕ್ರಮದಲ್ಲಿ ಧನ್ವಂತರಿ ದೇವತೆಯ ಭಾವಚಿತ್ರಕ್ಕೆ ಪುಷ್ಪಾರ್ಚನೆ ಹಾಗೂ ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ರಾಜ್ಯದಲ್ಲಿ 3ನೇ ಅಲೆಯ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಆಯಾ ಜಿಲ್ಲೆಗಳಲ್ಲಿ ಅಪೌಷ್ಟಿಕತೆ, ತೂಕ ಕಡಿಮೆ ಇರುವ ಮಕ್ಕಳ ಬಗ್ಗೆ ಮಾಹಿತಿ ನೀಡುವಂತೆ ಕೇಳಿತ್ತು. ಅದರಂತೆ ಜಿಲ್ಲೆಯಲ್ಲಿ ಮಾಹಿತಿ ಸಂಗ್ರಹಿಸಲಾಗಿತ್ತು. ಸಮೀಕ್ಷೆಯಂತೆ ಜಿಲ್ಲೆಯಲ್ಲಿ 8900 ಸಾಧಾರಣ ತೂಕ ಇರುವ ಮಕ್ಕಳು ಹಾಗೂ 185 ಮಕ್ಕಳು ಅಪೌಷ್ಠಿಕತೆಯಿಂದ ಬಳಲುತ್ತಿದ್ದರು. ಈ ವೇಳೆ ಅಂತಹ ಮಕ್ಕಳಿಗೆ ಹಾಗೂ ತಾಯಂದಿರಿಗೆ ಆಯುಷ್ ಇಲಾಖೆಯಿಂದ ರೋಗ ನಿರೋಧಕ ಶಕ್ತಿ ಹೆಚ್ಚಿಸುವಂತಹ ಔಷಧಿ ನೀಡಲಾಯಿತು ಎಂದು ಮಾಹಿತಿ ನೀಡಿದರು.



ಇದರಿಂದಾಗಿ ಕಳೆದ 6 ತಿಂಗಳಲ್ಲಿ ತೂಕ ಕಡಿಮೆ ಇದ್ದ ಮತ್ತು ಅಪೌಷ್ಟಿಕತೆಯುಳ್ಳ ಇದ್ದ ಮಕ್ಕಳು ಸಾಮಾನ್ಯ ಮಕ್ಕಳಂತೆ ಶೇ.50 ರಷ್ಟು ಪರಿವರ್ತನೆಗೊಂಡಿವೆ. ಆಯುಷ್ ಇಲಾಖೆಯಿಂದ ನೀಡಲಾದ ಕೂಷ್ಮಾಂಡ ರಸಾಯನ ಹಾಗೂ ಅರವಿಂದಾಸವ ಔಷಧಿಗಳನ್ನು ನೀಡಲಾಗಿತ್ತು. ಇದರಿಂದಾಗಿ ತೀವ್ರ ಅಪೌಷ್ಟಿಕತೆ ಹಾಗೂ ಸಾಧಾರಣ ತೂಕ ಇದ್ದ ಮಕ್ಕಳು ಸಾಮಾನ್ಯ ಮಕ್ಕಳಂತೆ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಿಕೊಂಡಿದ್ದಾರೆ. ಆಯುಷ್ ಇಲಾಖೆಯ ಔಷಧಿಗಳು ಉತ್ತಮ ಪರಿಣಾಮ ಬೀರಿವೆ. ಕಾರಣ ಈ ಕುರಿತು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯದರ್ಶಿಗಳೊಂದಿಗೆ ಚರ್ಚಿಸಿ ಮಕ್ಕಳು, ಮಹಿಳೆಯರಿಗೆ ಔಷಧಿಗಳನ್ನು ಮುಂದುವರೆಸಲು ಪ್ರಯತ್ನಿಸಲಾಗುವುದು ಎಂದರು.

ಜಿಲ್ಲಾ ಆರೋಗ್ಯಾಧಿಕಾರಿ ಡಾ. ನಾಗರಾಜ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಆಯುರ್ವೇದ ಚಿಕಿತ್ಸೆ ಹೆಚ್ಚು ಪ್ರಚಲಿತವಾಗುತ್ತಿದೆ. ಗ್ರಾಮ ಪಂಚಾಯತಿ ಮಟ್ಟದಲ್ಲಿ ಹೆಚ್ಚಿನ ಒತ್ತು ನೀಡಬೇಕಿದೆ.

## ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕ ವಿಜಯ್‌ಕುಮಾರ್

ಇಡೀ ಪ್ರಪಂಚದಾದ್ಯಂತ ಆಯುವೇದದ ಬಗ್ಗೆ ಈಗ ತಿಳಿದುಕೊಳ್ಳುತ್ತಿದೆ. ಆದರೆ, ಈ ಪದ್ಧತಿ ಬಗ್ಗೆ ಹೆಚ್ಚಾಗಿ ಒತ್ತು ಕೊಡದ ಹಿನ್ನೆಲೆಯಲ್ಲಿ ಹೆಚ್ಚಾಗಿ ಪ್ರಚಲಿತಕ್ಕೆ ಬರಲಿಲ್ಲ. ಇದರಿಂದಾಗಿ ಅಲೋಪತಿಕ್ ಚಿಕಿತ್ಸೆ ಪ್ರಾಮುಖ್ಯತೆ ಪಡೆದಿದೆ. ಆದರೆ, ಇದರ ಹೆಚ್ಚು ಬಳಕೆಯಿಂದ ಅಡ್ಡ ಪರಿಣಾಮಗಳು ಬರುತ್ತವೆ. ಆದರೆ, ಆಯುರ್ವೇದದಲ್ಲಿ ಅಡ್ಡಪರಿಣಾಮಗಳಿಲ್ಲ ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಜಿಲ್ಲಾ ಆಯುಷ್ ಅಧಿಕಾರಿ ಡಾ.ಶಂಕರಗೌಡ, ಆಯುಷ್ ಇಲಾಖೆಯಿಂದ ನೀಡಲಾದ ವೈದ್ಯ ಪದ್ಧತಿಗಳ ಬಗ್ಗೆ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ನಿವೃತ್ತ ಜಿಲ್ಲಾ ಆಯುಷ್ ಅಧಿಕಾರಿ ಡಾ. ಯು.ಸಿದ್ದೇಶ್, ಅಶ್ವಿನಿ ಆಯುರ್ವೇದ ಕಾಲೇಜಿನ ಡೀನ್ ಎಂ.ಎನ್.ಹಿರೇಮಠ್, ಕೆಜಿಎಎಂಓಎ ಜಿಲ್ಲಾ ಘಟಕದ ಅಧ್ಯಕ್ಷ ಮಲ್ಲಿಕಾರ್ಜುನ ಬೂದಿಹಾಳ್, ಜಿಲ್ಲಾ ಯೋಗ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ವಾಸುದೇವ ರಾಯ್ಕರ್, ತಪೋವನದ ಎಂ.ಡಿ ಶಶಿಧರ್ ಮಾತನಾಡಿದರು.

ಈ ವೇಳೆ ಆಯುಷ್ ವೈದ್ಯಾಧಿಕಾರಿಗಳಾದ ಡಾ.ದ್ಯಾವನಗೌಡ, ಡಾ.ಸಿದ್ದೇಶ್ ಬಿಸ್ನಾಳ್, ಡಾ.ಚಂದ್ರಕಾಂತ್ ನಾಗಸಮುದ್ರ, ಡಾ.ಯಶವಂತ್, ಡಾ. ಸುಚಿತ್ರ, ಡಾ.ಸುಧಾ ಸೇರಿದಂತೆ ಜಿಲ್ಲೆಯ ಎಲ್ಲಾ ಸರ್ಕಾರಿ ಆಯುಷ್ ಔಷಧಾಲಯಗಳ ವೈದ್ಯಾಧಿಕಾರಿಗಳು, ಅಂಗನವಾಡಿ ಕಾರ್ಯಕರ್ತೆಯರು ಇದ್ದರು.

## ಪಡಿತರ ಚೀಟಿದಾರರ ಇ-ಕೆವೈಸಿಗೆ ಅವಧಿ ವಿಸ್ತರಣೆ

ಹಾವೇರಿ, ನ.2- ಜಿಲ್ಲೆಯ ಎಲ್ಲಾ ಅಂತ್ಯೋದಯ ಹಾಗೂ ಪಿಹೆಚ್‌ಹೆಚ್ (ಬಿಪಿಎಲ್) ಹಾಗೂ ಎನ್‌ಪಿಹೆಚ್‌ಹೆಚ್ (ಎಪಿಎಲ್) ಪಡಿತರ ಚೀಟಿ ಹೊಂದಿರುವ ಕುಟುಂಬದ ಎಲ್ಲಾ ಸದಸ್ಯರು ತಮಗೆ ಸಂಬಂಧಿಸಿದ ನ್ಯಾಯಬೆಲೆ ಅಂಗಡಿಗೆ ಭೇಟಿ ನೀಡಿ, ಒಂದು ಬಾರಿ ಇ-ಕೆವೈಸಿ ನೀಡಲು ಅವಧಿ ವಿಸ್ತರಿಸಲಾಗಿದೆ.

ನವೆಂಬರ್ 1 ರಿಂದ ನ.10ರವರೆಗೆ ಪ್ರತಿದಿನ ನ್ಯಾಯಬೆಲೆ ಅಂಗಡಿಗಳ ನಿಯದಿತ ಸಮಯದಲ್ಲಿ ಇ-ಕೆವೈಸಿ ಸಂಗ್ರಹಣೆ ಕಾರ್ಯವನ್ನು ಮುಂದುವರೆಸಲಾಗಿದೆ. ಇದು ಪಡಿತರ ಚೀಟಿಯಲ್ಲಿರುವ ಕುಟುಂಬದ ಎಲ್ಲಾ ಸದಸ್ಯರು ತಮ್ಮ ನ್ಯಾಯಬೆಲೆ ಅಂಗಡಿಗೆ ಹೋಗಿ ಬೆರಳಚ್ಚು ನೀಡುವ ಪ್ರಕ್ರಿಯೆಯಾಗಿರುತ್ತದೆ. ಇ-ಕೆವೈಸಿ ಸೇವೆಯು ಉಚಿತ ಸೇವೆಯಾಗಿರುತ್ತದೆ. ಇದಕ್ಕಾಗಿ ಪಡಿತರ ಚೀಟಿದಾರರು ನ್ಯಾಯಬೆಲೆ ಅಂಗಡಿ ಸಂಚಾಲಕರಿಗೆ ಯಾವುದೇ ದುಡ್ಡು ನೀಡುವ ಅವಶ್ಯಕತೆ ಇಲ್ಲ. ಒಂದು ವೇಳೆ ಈ ಬಗ್ಗೆ ಯಾವುದೇ ದೂರುಗಳಿದ್ದಲ್ಲಿ ಸಂಬಂಧಪಟ್ಟ ತಹಶೀಲ್ದಾರರು ಹಾಗೂ ತಾಲ್ಲೂಕಿನ ಆಹಾರ ಶಿರಸ್ತೇದಾರ್, ನಿರೀಕ್ಷಕರುಗಳಿಗೆ ಮತ್ತು ಉಪ ನಿರ್ದೇಶಕರು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಹಾವೇರಿ ಇವರಿಗೆ ದೂರು ಸಲ್ಲಿಸಬೇಕು.

ಜಿಲ್ಲೆಯಲ್ಲಿ ಅಂತ್ಯೋದಯ ಹಾಗೂ ಪಿಹೆಚ್‌ಹೆಚ್ (ಬಿಪಿಎಲ್) ಪಡಿತರ ಸದಸ್ಯರ ಇ-ಕೆವೈಸಿ ಕಾರ್ಯದಲ್ಲಿ 91.15 ಶೇ. ಪ್ರಗತಿ ಸಾಧಿಸಿದ್ದು, 8.85 ಶೇ. ಪ್ರಗತಿ ಸಾಧಿಸುವುದು ಬಾಕಿ ಇರುತ್ತದೆ.

ಸರ್ಕಾರವು ಇ-ಕೆವೈಸಿ ನೀಡಲು ಈ ತಿಂಗಳ ನವೆಂಬರ್ 10 ರವರೆಗೆ ಕೊನೆಯ ಅವಕಾಶ ನೀಡಿದ್ದು, ಒಂದು ವೇಳೆ ಈ ಅವಧಿಯಲ್ಲಿ ಇ-ಕೆವೈಸಿ ಮಾಡಿಸದಿದ್ದಲ್ಲಿ ಮುಂದಿನ ಆಗುಹೋಗುಗಳಿಗೆ ಪಡಿತರ ಚೀಟಿದಾರರೇ ನೇರ ಹೊಣೆಗಾರರಾಗಿರುತ್ತಾರೆ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಉಪನಿರ್ದೇಶಕ ವಿನೋದಕುಮಾರ ಹೆಗ್ಗಳಗಿ ತಿಳಿಸಿದ್ದಾರೆ.

## ರಾಣೇಬೆನ್ನೂರು : ಸಾಧು ವೀರಶೈವ ಸಮಾಜಕ್ಕೆ ಪದಾಧಿಕಾರಿಗಳ ಆಯ್ಕೆ



ರಾಣೇಬೆನ್ನೂರು, ನ.2- ಸಮಾಜದ ಹಿತಚಿಂತನೆ ಹಾಗೂ ಇತರೆ ಸಮಾಜಗಳ ಜೊತೆಗೆ ಸಹಬಾಳ್ವೆ ನಡೆಸುವ ಆಶಾಭಾವನೆಯೊಂದಿಗೆ ತಾಲ್ಲೂಕು ಸಾಧು ವೀರಶೈವ ಸಮಾಜದ ಪದಾಧಿಕಾರಿಗಳನ್ನು 2 ವರ್ಷ ಅಥವಾ ಮುಂದಿನ ಆದೇಶದವರೆಗೆ ಕಾರ್ಯ ನಿರ್ವಹಿಸುವಂತೆ ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳು ಆಯ್ಕೆ ಮಾಡಿದ್ದಾರೆ. ಅಧ್ಯಕ್ಷರಾಗಿ ಶಿವಪ್ಪ ನಂದಿಹಳ್ಳಿ, ಉಪಾಧ್ಯಕ್ಷರಾಗಿ ಈರಪ್ಪ ಮಾಕನೂರ, ಖಜಾಂಚಿ ಗದಿಗೆಪ್ಪ ಹೊಟ್ಟಿಗೌಡ್ರ, ಕಾರ್ಯದರ್ಶಿಗಳಾಗಿ ರೇವಣಪ್ಪ ಗೌಡಶಿವಣ್ಣನವರ, ಮಂಜುನಾಥ ಗೌಡಶಿವಣ್ಣನವರ, ಉಮೇಶ ಹೊನ್ನಾಳಿ, ಕರೇಗೌಡ ಧೂಳೆಹೊಳೆ ಆಯ್ಕೆಗೊಂಡಿದ್ದಾರೆ.

ಹಿರಿಯ ಸದಸ್ಯರಾದ ಮಂಜುನಾಥ ಮಾಕನೂರ, ಶಿವನಗೌಡ ನಂದಿಗಾವಿ, ಮಮತ ಕೋಟೆಗೌಡ್ರ, ಶೋಭಾ ಬೆಳವಿಗಿ, ಮಮತ ಹಾದಿಮನಿ, ವಂದನಾ ಕೊಪ್ಪದ, ಚಂದ್ರಪ್ಪ ಬುಡ್ಡಣ್ಣನವರ, ಲಿಂಗನಗೌಡ ಸಂಗನಗೌಡ್ರ, ಭಾರತಿ ಕರ್ಜಗಿ, ಮಲ್ಲಿಕಾರ್ಜುನ ಬುರಡಿಕಟ್ಟಿ, ಮಲ್ಲಿಕಾರ್ಜುನ ಕೋಡಿಹಳ್ಳಿ, ಸಣ್ಣಗೌಡ ಸಣ್ಣಗೌಡ್ರ, ಮಲ್ಲಿಕಾರ್ಜುನ ನೆಗಳೂರ, ಪ್ರಕಾಶ ಹರಿಯಾಳದ ಆಯ್ಕೆಯಾಗಿದ್ದಾರೆ.

## ಕಾರ್ ರ್‍ಯಾಲಿಯಲ್ಲಿ : ಅಂಧ ಮಕ್ಕಳು




ರಾಣೇಬೆನ್ನೂರು, ಅ.2- ಪಟ್ಟಣದ ಸ್ನೇಹದೀಪ ಅಂಧ, ಅಂಗವಿಕಲರ ಸಂಸ್ಥೆ ಇತ್ತೀಚೆಗೆ ಹುಬ್ಬಳ್ಳಿಯಲ್ಲಿ ರೌಂಡ್ ಟೇಬಲ್ ಇಂಡಿಯಾ ಮತ್ತು ಲೇಡಿಸ್ ಸರ್ಕಲ್ ಇಂಡಿಯಾ ವತಿಯಿಂದ ಆಯೋಜಿಸಲಾಗಿದ್ದ ಬ್ಲೈಂಡ್ ಕಾರ್ ರ್‍ಯಾಲಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಸಂಸ್ಥೆಯ 30 ಅಂಧ ವಿದ್ಯಾರ್ಥಿಗಳು ಭಾಗವಹಿಸಿದ್ದು, ಸಂಸ್ಥೆಯ ಕಾರ್ಯವೈಖರಿ ಕುರಿತು ರೌಂಡ್ ಟೇಬಲ್ ಕ್ಲಬ್ ಸದಸ್ಯ ಪ್ರವೀಣ ಹೆಬಸೂರು ಮೆಚ್ಚುಗೆ ವ್ಯಕ್ತಪಡಿಸಿದರು.

## ಪ್ರತಿ ಗ್ರಾಮಗಳಲ್ಲಿ ಕಾನೂನು ಅರಿವು, ನೆರವು ಜಾಗೃತಿ ಅಭಿಯಾನ : ನ್ಯಾ.ಜಿ.ತಿಮ್ಮಯ್ಯ



ಜಗಳೂರು

ಜಗಳೂರು, ನ.2- ಸುಪ್ರೀಂಕೋರ್ಟ್ ಮತ್ತು ಹೈಕೋರ್ಟ್‌ಗಳ ನಿರ್ದೇಶನದಂತೆ ತಾಲ್ಲೂಕಿನ ಪ್ರತಿ ಕಂದಾಯ ಗ್ರಾಮಗಳಲ್ಲಿ ಕಾನೂನು ಅರಿವು, ನೆರವು ಜಾಗೃತಿ ಮೂಡಿಸುವ ಗುರಿ ಹೊಂದಲಾಗಿದೆ ಎಂದು ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶ ಜಿ. ತಿಮ್ಮಯ್ಯ ತಿಳಿಸಿದರು.

ಪಟ್ಟಣದ ಜೆಎಂಎಫ್‌ಸಿ ಕೋರ್ಟ್ ಆವರಣದಲ್ಲಿ ಕಾನೂನು ಸೇವಾ ಸಮಿತಿ, ವಕೀಲರ ಸಂಘ ಹಾಗೂ ವಿವಿಧ ಇಲಾಖೆಗಳ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಪ್ಯಾನ್ ಇಂಡಿಯಾ ಎರಡನೇ ಜಾಗೃತಿ ಅಭಿಯಾನದಡಿ ಕಾನೂನು ಅರಿವು-ನೆರವು ಕಾರ್ಯಕ್ರಮಗಳ ಭಿತ್ತಿಚಿತ್ರಗಳನ್ನು ಸಾರ್ವಜನಿಕರಿಗೆ ವಿತರಿಸುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ರೈತಾಪಿ ಬಡ ವರ್ಗದವರಿಗೆ ಕಾನೂನು ಅರಿವು ಅಗತ್ಯವಿದೆ. ಜಮೀನು, ನಿವೇಶನದಂತಹ ಆಸ್ತಿಗಳು ಮೌಲ್ಯಯುತವಾಗಿದ್ದು, ಮಧ್ಯವರ್ತಿಗಳ ಮುಖಾಂತರ ಖರೀದಿಗೆ ಮುಂದಾಗಿ, ಕಾನೂನು ಸಮಸ್ಯೆ ಎದುರಿಸುವ ಬದಲು, ಕಾನೂನು ತಜ್ಞರ ಮೂಲಕ ಆಸ್ತಿ ಖರೀದಿಗೆ ಮುಂದಾಗಬೇಕು ಎಂದು ಸಲಹೆ ನೀಡಿದರು.

ಕೊರೊನಾ ಆಕ್ರಮಣದ ಹಿನ್ನೆಲೆಯಲ್ಲಿ ಕಾನೂನು ಅರಿವು ಕಾರ್ಯಕ್ರಮಗಳು ಕಳೆದ ಎರಡು ವರ್ಷಗಳಿಂದ ಸ್ಥಗಿತಗೊಂಡಿದ್ದು, ಗಾಂಧಿ ಜಯಂತಿಯಿಂದ ಪ್ರಾರಂಭವಾಗಿದೆ. ಮೊದಲನೆ ಜಾಗೃತಿ ಅಭಿಯಾನದಡಿ ವಕೀಲರ ಸಂಘ ತಾಲ್ಲೂಕಿನ 22 ಗ್ರಾಮ ಪಂಚಾಯ್ತಿಗಳಲ್ಲಿ 11 ಗ್ರಾಮ ಪಂಚಾಯ್ತಿ ವ್ಯಾಪ್ತಿಗಳ ಹಳ್ಳಿಗಳಿಗೆ ತೆರಳಿ ಕಾನೂನು ಅರಿವು ಮೂಡಿಸಲಾಗಿದೆ ಎಂದರು.

ಬರುವ ಡಿಸೆಂಬರ್ 18ಕ್ಕೆ ಬೃಹತ್ ಲೋಕ ಅದಾಲತ್ ಹಮ್ಮಿಕೊಳ್ಳಲಾಗಿದ್ದು, ವ್ಯಾಜ್ಯ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಲು ಇದೊಂದು ಸುವರ್ಣಾವಕಾಶ. ನಾಗರಿಕರು ಸದುಪಯೋಗ ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದರು.

ಸರ್ಕಾರಿ ಸಹಾಯಕ ಅಭಿಯೋಜಕಿ ಎಂ. ರೂಪ, ವಕೀಲರ ಸಂಘದ ಅಧ್ಯಕ್ಷ ಹೆಚ್. ಬಸವರಾಜ್, ಕಾರ್ಯದರ್ಶಿ ತಿಪ್ಪೇಸ್ವಾಮಿ, ಪದಾಧಿಕಾರಿಗಳಾದ ವೈ. ಹನುಮಂತಪ್ಪ, ರುದ್ರೇಶ್, ಕರಿಬಸಪ್ಪ, ಕೆ.ಎಂ. ಬಸವರಾಜಪ್ಪ, ಪಂಪಾಪತಿ ,ಹಾಲಪ್ಪ, ಬೋರಯ್ಯ, ಸಣ್ಣೋಬಯ್ಯ, ನಾಗೇಶ್ ಇನ್ನಿತರರು ಭಾಗವಹಿಸಿದ್ದರು.

## ಸಾಧನ ಅನಾಥಾಶ್ರಮದಲ್ಲಿ ಕನ್ನಡ ರಾಜ್ಯೋತ್ಸವ



ದಾವಣಗೆರೆ, ನ. 2- ಸಾಧನ ವೃದ್ಧಾಶ್ರಮ ಮತ್ತು ಅನಾಥಾಶ್ರಮದಲ್ಲಿ ಕನ್ನಡ ರಾಜ್ಯೋತ್ಸವವನ್ನು ಸರಳವಾಗಿ ಆಚರಿಸಲಾಯಿತ್ತು.

ಮುಖ್ಯ ಅತಿಥಿಗಳಾಗಿ ಹೊನ್ನಾಯಕನಹಳ್ಳಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ರುದ್ರೇಶ್ ಮತ್ತು ತುರ್ಚಘಟ್ಟ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಚೆನ್ನಕೇಶವ ಅವರು ಆಗಮಿಸಿದ್ದರು.

ಕನ್ನಡ ನಾಡು, ನುಡಿಗಳನ್ನು ಭಾಷೆ ಅನ್ನು ಉಳಿಸಿ ಬೆಳೆಸುವುದು ನಮ್ಮೆಲ್ಲರ ಕರ್ತವ್ಯ. ಕನ್ನಡ ನಾಡಿನಲ್ಲಿ ಹುಟ್ಟಿರುವುದೇ ನಮ್ಮ ಪುಣ್ಯ.

ಈ ಕ್ಷಣದಲ್ಲಿ ಗಡಿ ಕಾಯುವ ಯೋಧರನ್ನು ಮತ್ತು ರೈತರನ್ನು ಹೃದಯ ಪೂರ್ವಕವಾಗಿ ನೆನಪಿಸಿ ಗೌರವಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ ಎಂದು ಡಾ. ಪುಷ್ಪಲತಾ ಪವಿತ್ರ ರಾಜ್ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಶರೀಫ್ ಗುರು ಅನುಷಾ ಉಪಸ್ಥಿತರಿದ್ದರು.

## ವಿದ್ಯಾರ್ಥಿ ವೇತನ : ಅವಧಿ ವಿಸ್ತರಣೆ


ದಾವಣಗೆರೆ, ನ.2- 2021-22 ನೇ ಸಾಲಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಮೆಟ್ರಿಕ್ ನಂತರದ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ-1 ಅಲೆಮಾರಿ/ಅರೆ ಅಲೆಮಾರಿ ವಿದ್ಯಾರ್ಥಿಗಳಿಂದ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ, ಶುಲ್ಕ ವಿನಾಯಿತಿ ಮತ್ತು ವಿದ್ಯಾಸಿರಿ-ಊಟ ಮತ್ತು ವಸತಿ ಸಹಾಯ ಯೋಜನೆ ಸೌಲಭ್ಯ ನೀಡಲು ಆಹ್ವಾನಿಸಲಾಗಿದ್ದ ಅರ್ಜಿ ಅವಧಿಯನ್ನು ನ.30 ರವರೆಗೆ ವಿಸ್ತರಿಸಲಾಗಿದೆ.

ಈ ಹಿಂದೆ ಅರ್ಜಿ ಸಲ್ಲಿಸುವ ದಿನವನ್ನು ಅ.10 ಕ್ಕೆ ನಿಗದಿಗೊಳಿಸಲಾಗಿತ್ತು. ಆದರೆ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಅರ್ಜಿ ಸಲ್ಲಿಸುವ ಅವಧಿಯನ್ನು ನ.31ಕ್ಕೆ ವಿಸ್ತರಿಸಲಾಗಿದೆ. ಆನ್‌ಲೈನ್ ಅರ್ಜಿ ಸಲ್ಲಿಸಲು ವೆಬ್‌ಸೈಟ್ www.ssp.postmatric.karnataka.gov.in ನಲ್ಲಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ www.bcwd.karnataka.gov.in ವೆಬ್‌ಸೈಟ್ ಭೇಟಿ ಮಾಡಬಹುದು. ಇಲಾಖಾ ಸಹಾಯವಾಣಿ ಸಂಖ್ಯೆ 80507 70005/80507 70004, 080-3525 4757, ಇಮೇಲ್ bcwd.scholarship@karnataka.gov.in ಸಂಪರ್ಕಿಸಬಹುದು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ತಿಳಿಸಿದೆ.

## ಹರಿಹರ : ಕಟ್ಟಡ ಬಾಡಿಗೆ ನೀಡಲು ಆಸಕ್ತರಿಂದ ಅರ್ಜಿ ಆಹ್ವಾನ

ಹರಿಹರ, ನ.2- ಕೇಂದ್ರ ಪುರಸ್ಕೃತ ಡೇ-ನಲ್ಮ್ ಯೋಜನೆಯಡಿ ನಗರದ ವಸತಿ ರಹಿತ ಆಶ್ರಯ ಉಪ ಘಟಕದ ಆಶ್ರಯ ನಿರ್ವಹಣೆಯ ಕಾರ್ಯಕ್ರಮ ದಡಿ ತಾತ್ಕಾಲಿಕವಾಗಿ ವಸತಿ ರಹಿತರ ಕೇಂದ್ರವನ್ನು ಪ್ರಾರಂಭಿಸಲಿದೆ. ಸರ್ಕಾರದ ಮಾರ್ಗಸೂಚಿಯನ್ವಯ ಎರಡು ಕೊಠಡಿಗಳು ಹಾಗೂ ಶೌಚಾಲಯಗಳನ್ನು ಹೊಂದಿರುವ ವಿಶಾಲವಾದ ವಸತಿ ಯೋಗ್ಯವಾದ ಕಟ್ಟಡವನ್ನು ಹೊಂದಿರುವ ಕಟ್ಟಡದ ಮಾಲೀಕರಿಗೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ. 7 ದಿನಗಳೊ ಳಗೆ (ನ.12ರ ಸಂಜೆ 4 ರೊಳಗೆ) ಬಾಡಿಗೆ ನೀಡಲು ಆಸಕ್ತಿ ಹೊಂದಿರುವವರು ಕಟ್ಟಡದ ಬಾಡಿಗೆಯ ದರ ಮತ್ತು ವಿಳಾಸ, ಛಾಯಾಚಿತ್ರ ಹಾಗೂ ಕಟ್ಟಡಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪೌರಾಯುಕ್ತರು, ನಗರಸಭೆ, ಹರಿಹರ ಇವರಿಗೆ ಸಲ್ಲಿಸುವಂತೆ ಪೌರಾಯುಕ್ತರು ತಿಳಿಸಿದ್ದಾರೆ.

## ಕನಗೊಂಡನಹಳ್ಳಿ ಎರೆಸೀಮೆ ಬಸಪ್ಪ ನಿಧನ



ದಾವಣಗೆರೆ ತಾಲ್ಲೂಕು ಕನಗೊಂಡನಹಳ್ಳಿ ಗ್ರಾಮದ ಯರೆಸೀಮೆ ಬಸಪ್ಪ (87) ಅವರು ದಿನಾಂಕ 02.11.2021ರ ಮಂಗಳವಾರ ಸಂಜೆ 4.35ಕ್ಕೆ ನಿಧನರಾದರು. ಮೂವರು ಪುತ್ರರು, ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 03.11.2021ರ ಬುಧವಾರ ಕನಗೊಂಡನಹಳ್ಳಿಯಲ್ಲಿ ನೆರವೇರಲಿದೆ.

## ಸಿ. ಕುಮಾರ್ ನಿಧನ



ದಾವಣಗೆರೆ ಕೊಂಡಜ್ಜಿ ರಸ್ತೆ, ವಿಜಯನಗರ ಬಡಾವಣೆ ವಾಸಿ, ಸವಿತಾ ಸಮಾಜದ ಬಸ್ತಿಪಾಡು ಬಿ.ಎನ್. ಚಂದ್ರಶೇಖರ್ ಅವರ ಪುತ್ರ ಕುಮಾರ್ ಸಿ. (25) ಇವರು, ದಿನಾಂಕ 2.11.2021ರ ಸಂಜೆ 7 ಗಂಟೆಗೆ ನಿಧನರಾದರು. ತಂದೆ, ತಾಯಿ, ಸಹೋದರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 3.11.2021ರ ಮಧ್ಯಾಹ್ನ 12.30ಕ್ಕೆ ಗಾಂಧಿನಗರದ ರುದ್ರಭೂಮಿಯಲ್ಲಿ ನೆರವೇರಲಿದೆ.

## ಕಾರು-ಬೈಕ್ ಮಧ್ಯೆ ಅಪಘಾತ

### ಗಾಯಾಳುಗಳ ಜೀವ ಉಳಿಸಿದ ಪೊಲೀಸರು

ದಾವಣಗೆರೆ, ನ.2- ಕಾರು ಮತ್ತು ಬೈಕ್ ಮಧ್ಯೆ ಸಂಭವಿಸಿದ ಅಪಘಾತದಲ್ಲಿ ಗಾಯಗೊಂಡ ಇಬ್ಬರನ್ನು ಸಮಯಕ್ಕೆ ಸರಿಯಾಗಿ ಆಸ್ಪತ್ರೆಗೆ ದಾಖಲಿಸಿ ಜೀವ ಉಳಿಸುವ ಮೂಲಕ 112 ತುರ್ತು ಪೊಲೀಸರು ಮಾನವೀಯತೆ ಜೊತೆಗೆ ಕರ್ತವ್ಯ ನಿಷ್ಠೆ ತೋರಿದ್ದಾರೆ.

ತಾಲ್ಲೂಕಿನ ಮಲ್ಲಾಪುರ ಕ್ರಾಸ್ ಬಳಿ ಇಂದು ಸಂಜೆ ವೇಳೆ ಅಪಘಾತ ಸಂಭವಿಸಿದ್ದು, ಈ ಬಗ್ಗೆ ಸ್ಥಳೀಯರಿಂದ ಬಂದ ಮಾಹಿತಿ ಆಧರಿಸಿ ಸ್ಥಳಕ್ಕಾಗಮಿಸಿದ 112 ತುರ್ತು ಸಹಾಯವಾಣಿ ಪೊಲೀಸರು, ಗಾಯಾಳುಗಳನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಿದ್ದಾರೆ. ಈ ಸಂಬಂಧ ದಾವಣಗೆರೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಅಪಘಾತಕ್ಕೊಳಗಾದ ಕಾರು ಮತ್ತು ಬೈಕ್ ವಶಕ್ಕೆ ಪಡೆಯಲಾಗಿದೆ.

## ಬಸ್‌ನಲ್ಲಿ ಬಂಗಾರ, ನಗದುವುಳ್ಳ ಬ್ಯಾಗ್ ಕಳ್ಳತನ

ದಾವಣಗೆರೆ, ನ.2- ಸರ್ಕಾರಿ ಬಸ್ ನಲ್ಲಿ ಪ್ರಯಾಣಿಸುತ್ತಿದ್ದ ತಮಿಳುನಾಡು ಮೂಲದ ಬಂಗಾರದ ವ್ಯಾಪಾರಿಯೋರ್ವರ 1.3 ಲಕ್ಷ ರೂ. ಮೌಲ್ಯದ ಚಿನ್ನಾಭರಣ, ಬಂಗಾರದ ಬಾಕಿಯ 1 ಲಕ್ಷದ 38 ಸಾವಿರ ನಗದು ಹಣವುಳ್ಳ ಬ್ಯಾಗನ್ನು ಕಳವು ಮಾಡಿರುವ ಘಟನೆ ದಾವಣಗೆರೆ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ತಮಿಳುನಾಡು ರಾಜ್ಯದ ಸೂರಮಂಗಲಂ ವಾಸಿ ಪಿ. ಮುರುಗನ್ ಎಂಬಾತ ಅಕ್ಕಸಾಲಿಗ ಕೆಲಸ ಮಾಡುತ್ತಿದ್ದು, ಕಳೆದ ಅ.29ರಿಂದ ಸೇಲಂನಿಂದ ದಾವಣಗೆರೆ, ಹುಬ್ಬಳ್ಳಿ, ಹಾವೇರಿ, ರಾಣೇಬೆನ್ನೂರು ಇಲ್ಲಿ ಬಂಗಾರದ ಅಂಗಡಿಗಳಿಂದ ಬರಬೇಕಿದ್ದ 1 ಲಕ್ಷದ 38 ಸಾವಿರ ನಗದು ಹಾಗೂ ಸೇಲಂನಿಂದ ತೆಗೆದುಕೊಂಡು ಬಂದಿದ್ದ ಮಾರಾಟವಾಗದೇ ಉಳಿದಿದ್ದ 18 ಸಾವಿರ ಮೌಲ್ಯದ 5 ಗ್ರಾಂ ತೂಕದ ಬಂಗಾರದ ಉಂಗುರ, 85 ಸಾವಿರ ಮೌಲ್ಯದ 4 ಬಂಗಾರದ ಗಟ್ಟಿ, 18 ಸಾವಿರ ಮೌಲ್ಯದ 5 ಗ್ರಾಂ ತೂಕದ ಬಂಗಾರದ ಉಂಗುರುವುಳ್ಳ ಬ್ಯಾಗ್ ಸಹಿತ ದಾವಣಗೆರೆಯಿಂದ ಬೆಂಗಳೂರಿಗೆ ಕೆಎಸ್ ಆರ್ ಟಿಸಿ ಬಸ್‌ನಲ್ಲಿ ಪ್ರಯಾಣಿಸುವಾಗ ರಾಷ್ಟ್ರೀಯ ಹೆದ್ದಾರಿ-48ರ ರಸ್ತೆಯಲ್ಲಿ ಬರುವ ಬಿಂದಾಸ್ ಡಾಬಾ ಹತ್ತಿರ ರಾತ್ರಿ ಊಟಕ್ಕೆಂದು ಬಸ್ ನಿಲ್ಲಿಸಿದ್ದಾಗ, ತಮ್ಮ ಬ್ಯಾಗನ್ನು ತಾವು ಕುಳಿತಿದ್ದ ಸೀಟಿನ ಕೆಳಗಿಟ್ಟು ಬಸ್ ಇಳಿದು 2-3 ನಿಮಿಷ ಬಿಟ್ಟು ವಾಪಾಸ್ ಬರುವುದರೊಳಗಾಗಿ ಬಂಗಾರ, ನಗದುವುಳ್ಳ ಬ್ಯಾಗನ್ನು ಕಳವು ಮಾಡಲಾಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

## ಬೆಸ್ಕಾಂ ನೌಕರನಿಗೆ 73 ಸಾವಿರ ನಗದು ವಂಚನೆ

ದಾವಣಗೆರೆ, ನ.2- ಆನ್ ಲೈನ್ ನಗದು ವಿನಿಮಯ ಕಂಪನಿ ಅಧಿಕಾರಿ ಸೋಗಿನಲ್ಲಿ ಇಲ್ಲಿನ ಬೆಸ್ಕಾಂ ನೌಕರನೋರ್ವನಿಗೆ ಆನ್ ಲೈನ್ ಮುಖಾಂತರ 73 ಸಾವಿರ ನಗದು ವಂಚಿಸಿರುವ ಬಗ್ಗೆ ಸಿಇಎನ್ ಅಪರಾಧ ಪೊಲೀಸ್ ಠಾಣೆಯಲ್ಲಿ ದೂರು ನೀಡಲಾಗಿದೆ.

ಬೆಸ್ಕಾಂ ಕ್ವಾಟ್ರಸ್‌ನ ತೌಸಿಫ್ ಎನ್. ಮಕಾನ್‌ದಾರ್ ವಂಚನೆಗೊಳಗಾದ ಬೆಸ್ಕಾಂ ನೌಕರ. ನ.1ರಂದು ಬಿಎಸ್ ಎನ್ ಎಲ್ ಸಿಮ್ ಗೆ ಪೇ ಟಿಎಂ ನಲ್ಲಿ ರೀಚಾರ್ಜ್ ಮಾಡಿದ್ದು, ಅದು ಆಗದಿದ್ದಾಗ ಗೂಗಲ್ ನಲ್ಲಿನ ಪೇ ಟಿಎಂ ಕಸ್ಟಮರ್ ಕೇರ್ ಗೆ ದೂರವಾಣಿ ಮುಖೇನ ಸಂಪರ್ಕಿಸಿ ವಿಚಾರಿಸಿದ್ದು, ಮರುದಿನ ಕರೆ ಮಾಡಿದ ಅಪರಿಚಿತನು ತಾನು ಪೇಟಿಎಂ ಕಂಪನಿಯ ಅಧಿಕಾರಿ ಎಂದು ನಂಬಿಸಿ, ನಿಮ್ಮ ಹಣವನ್ನು ಮರಳಿಸಲು ಮೊಬೈಲ್‌ನಲ್ಲಿ ಆ್ಯಪ್ ಇನ್‌ಸ್ಟಾಲ್ ಮಾಡಿ, ತಾನು ಹೇಳಿದಂತೆ ಮಾಡಲು ತಿಳಿಸಿದ್ದು, ಅದರಂತೆ ಈತ ಆ್ಯಪ್ ನಲ್ಲಿ ಫೋನ್ ನಂಬರ್ ಮತ್ತು ರಿಚಾರ್ಜ್ ಹಣ ಹಾಕಿದ್ದಲ್ಲದೇ, 6 ಬಾರಿ ಬಂದ ಓಟಿಪಿ ನಂಬರ್ ಸಹ ತಿಳಿಸಿದ್ದು, ಇದಾದ ಬಳಿಕ ಹಂತ ಹಂತವಾಗಿ ಒಟ್ಟು 73 ಸಾವಿರ ರೂ. ಬ್ಯಾಂಕ್ ಖಾತೆಯಿಂದ ಹಣ ಕಡಿತವಾಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

## ಶ್ರೀ ಮಹದೇವ ಮೋಟಾರ್ಸ್ ಮಾಲೀಕರಾದ ಬಿ.ಕೆ. ಬಾಲಕೃಷ್ಣ ರಾವ್ ನಿಧನ



ದಾವಣಗೆರೆ ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್ 6ನೇ ಕ್ರಾಸ್ ವಾಸಿ ಶ್ರೀ ಮಹದೇವ ಮೋಟಾರ್ಸ್ ಮತ್ತು ಮಹದೇವ ಆಟೋಮೊಬೈಲ್ಸ್ ಮಾಲೀಕರಾದ

**ಬಿ.ಕೆ. ಬಾಲಕೃಷ್ಣ ರಾವ್**

ಇವರು ದಿನಾಂಕ 02.11.2021ರಂದು ಮಂಗಳವಾರ ಬೆಳಗ್ಗೆ 6 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 69 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರಿ, ಇಬ್ಬರು ಪುತ್ರರು, ಸೊಸೆಯಂದಿರು, ಅಳಿಯಂದಿರು, ಸಹೋದರ, ಸಹೋದರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 3.11.2021ರಂದು ಬುಧವಾರ ಬೆಳಗ್ಗೆ 11 ಗಂಟೆಗೆ ಪಿ.ಬಿ. ರಸ್ತೆಯಲ್ಲಿರುವ ವೈಕುಂಠಧಾಮದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬವರ್ಗದವರು: ಮೊ: 96201 73108**

## ಬೂಸ್ನೂರು ಸುಶೀಲಮ್ಮ ನಿಧನ

ಜನನ 2.11.1940



ಮರಣ 2.11.2021


ದಾವಣಗೆರೆ ಎಂ.ಸಿ.ಸಿ. 'ಎ' ಬ್ಲಾಕ್ ವಾಸಿ ಶ್ರೀ ಬೂಸ್ನೂರು ವಿರುಪಾಕ್ಷಪ್ಪನವರ ಧರ್ಮಪತ್ನಿ

**ಶ್ರೀಮತಿ ಸುಶೀಲಮ್ಮ**

ಇವರು ದಿನಾಂಕ 2.11.2021ರ ಮಂಗಳವಾರ ಬೆಳಗಿನ ಜಾವ 3.30ಕ್ಕೆ ನಿಧನರಾದರು. ಮೃತರಿಗೆ 82 ವರ್ಷವಯಸ್ಸಾಗಿತ್ತು. ಪತಿ, ಓರ್ವ ಪುತ್ರ, ನಾಲ್ವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು - ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 2.11.2021ರ ಮಂಗಳವಾರ ಮಧ್ಯಾಹ್ನ 3 ಗಂಟೆಗೆ ಗಾಂಧಿನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿತು.

**ಇಂತಿ ದುಃಖತಪ್ತರು: ಬೂಸ್ನೂರು ವಿರುಪಾಕ್ಷಪ್ಪ ಮತ್ತು ಮಕ್ಕಳು, ಅಳಿಯಂದಿರು,ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.**

## ನಾಲ್ಕನೇ ವರ್ಷದ ಪುಣ್ಯಸ್ಮರಣೆ



**ದಿ|| ಶ್ರೀಮತಿ ಪಾರ್ವತಮ್ಮ ಕಡ್ಲಯ್ಯ**

ನಿಧನ: 03.11.2017

"ತಾಯಿಗಿಂತ ದೇವರು ಜಗದಲ್ಲಿ ಇಲ್ಲ, ಅಕ್ಷರದಿಂದ ಅಮ್ಮನನ್ನು ವರ್ಣಿಸಲು ಆಗುವುದಿಲ್ಲ, ತಾಯಿಯ ಋಣವನ್ನು ತೀರಿಸುವುದಕ್ಕಂತೂ ಸಾಧ್ಯವೇ ಇಲ್ಲ"

ಸದಾ ನಿಮ್ಮ ಸ್ಮರಣೆಯಲ್ಲಿರುವ:

ಮಕ್ಕಳಾದ : ಟಿ.ಎಂ.ರುದ್ರಯ್ಯ, ನಿವೃತ್ತ ಎಎಸ್‌ಐ, ಟಿ.ಎಂ.ಸಿದ್ದಲಿಂಗಯ್ಯ, ಟಿ.ಎಂ.ಗಣೇಶಯ್ಯ, ಟಿ.ಎಂ. ನಾಗರಾಜಯ್ಯ, ಟಿ.ಎಂ. ಶಿವಯೋಗಿಸ್ವಾಮಿ, ಟಿ.ಎಂ. ಮಂಜುನಾಥಯ್ಯ, ಜಯಮ್ಮ ಶಶಿಕಲಾ ಹೆಚ್.ಎಂ.ರುದ್ರೇಶ್, ಚಂದ್ರಕಲಾ ಶ್ರೀಧರ ಸ್ವಾಮಿ

ಸೊಸೆಯಂದಿರಾದ: ಶ್ರೀಮತಿ ಕಮಲ, ಪೂರ್ಣಿಮ, ಲಲಿತ, ವಿಮಲಾಕ್ಷಿ, ರೇಖಾ

ಮೊಮ್ಮಕ್ಕಳಾದ: ಶ್ರೀಮತಿ ಗೀತಾರಾಣಿ, ಮಂಜುನಾಥ್ ಆರ್.ಎಂ., ಶ್ರೀಮತಿ ಸ್ವಾತಿ ಮತ್ತು ಬಿ. ವಿಶ್ವಾಸ್, ತಿಪ್ಪೇಶ್, ವಾಗೀಶ್, ಕಾರ್ತಿಕ್, ನಿಖಿಲ್, ಕೃತಿಕ, ಶಿವಶಂಕರ್, ಕಿರಣ್, ರವಿಶಂಕರ್, ಯಶಸ್, ಮಾ|| ಅಮಯ್, ಪಿಂಕಿ ಹಾಗೂ ಸಿಬ್ಬಂದಿ ವರ್ಗ, ಸ್ವಾತಿ ಇಂಡಸ್ಟ್ರೀಸ್, ದಾವಣಗೆರೆ.

## ಚಂಡೀಘಡ : ಕಾಂಗ್ರೆಸ್‌ಗೆ ಅಮರೀಂದರ್ ರಾಜೀನಾಮೆ, ಹೊಸ ಪಕ್ಷದ ಘೋಷಣೆ

ಚಂಡೀಘಡ, ನ. 2 – ಪಂಜಾಬ್ ಮಾಜಿ ಮುಖ್ಯಮಂತ್ರಿ ಅಮರೀಂದರ್ ಸಿಂಗ್ ಅವರು ಮಂಗಳವಾರ ಕಾಂಗ್ರೆಸ್‌ಗೆ ರಾಜೀನಾಮೆ ನೀಡಿದ್ದು, ಪಂಜಾಬ್ ಲೋಕ್ ಕಾಂಗ್ರೆಸ್ ಎಂಬ ಪಕ್ಷ ಸ್ಥಾಪಿಸುವುದಾಗಿ ಘೋಷಿಸಿದ್ದಾರೆ. ವಿಧಾನಸಭಾ ಚುನಾವಣೆ ಸನಿಹದಲ್ಲಿರುವಾಗಲೇ ಅಮರೀಂದರ್ ಸಿಂಗ್ ಈ ನಿರ್ಧಾರ ತೆಗೆದುಕೊಂಡಿದ್ದಾರೆ.

## ಜರೇಕಟ್ಟೆ ಜೀಜಮ್ಮ ನಿಧನ



ಜರೇಕಟ್ಟೆ ಗ್ರಾಮ, ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆಯ ವಾಸಿಯಾದ

**ಶ್ರೀಮತಿ ಜೀಜಮ್ಮ ಕೆ. (78)**

ಇವರು ದಿನಾಂಕ: 2.11.2021ರ ಮಂಗಳವಾರ ಮಧ್ಯಾಹ್ನ 1:30ಕ್ಕೆ ನಿಧನರಾದರು. ಇಬ್ಬರು ಪುತ್ರರು, ಮೂವರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 3.11.2021ರ ಮಧ್ಯಾಹ್ನ 12 ಗಂಟೆಗೆ ಜರೇಕಟ್ಟೆ ಗ್ರಾಮದಲ್ಲಿ ನೆರವೇರಲಿದೆ.

**ಇಂತಿ ದುಃಖತಪ್ತರು ಕುಟುಂಬ ವರ್ಗ**


Eswar Digitronics
SINCE 1951
70 YEARS OF TRUST
Eswar's Diwali Mega Offers
FREE HOME DELIVERY
INSTANT ADDITIONAL CASHBACK UPTO 25%*
ZERO INTEREST
ZERO DOWNPAYMENT
EXCLUSIVE OFFERS
CASH BACK UPTO 10,000/-
1 EMI FREE
29th OCTOBER TO 07th NOVEMBER 2021
SONY OLED 65" MODEL NO - XR65A80J STARTS FROM - 2,55,000/-* INSTANT CASH BACK UPTO 20,000/-
SAMSUNG 75" FREE SOUND BAR WORTH Rs 33,000/-* MODEL NO - 75AU8000 STARTS FROM - 1,10,990/-* INSTANT CASH BACK UPTO 9000/-
LG OLED 55" MODEL NO - OLED 55B1PTZ STARTS FROM - 1,75,990/-* INSTANT CASH BACK UPTO 12,000/-
SONY 75" MODEL NO - 75X80J STARTS FROM - 1,80,000/-* INSTANT CASH BACK UPTO 10,000/-
Haier 75" MODEL NO - 75K6600HQGA STARTS FROM - 1,39,900/-* INSTANT CASH BACK UPTO 10,000/-
SAMSUNG FAMILY HUB 700 LTR SIDE BY SIDE INSTANT CASH BACK UPTO 12,000/- + GIFT STARTS FROM - 76,120/-*
BOSCH 658 LTR INSTANT CASH BACK UPTO 10,000/- + GIFT STARTS FROM - 72,990/-*
LG 687 LTR INSTANT CASH BACK UPTO 9,000/- + GIFT STARTS FROM - 86,500/-*
Haier 578 LTR INSTANT CASH BACK UPTO 6,000/- + GIFT STARTS FROM - 59,900/-*
Godrej 810 LTR INSTANT CASH BACK UPTO 2,000/- + GIFT STARTS FROM - 19,900/-*
SAMSUNG FRONT LOAD W/M 8 KG INSTANT CASH BACK UPTO 9,000/- STARTS FROM - 38,000/-*
BOSCH 9 KG INSTANT CASH BACK UPTO 7,000/- STARTS FROM - 46,900/-*
LG 8 KG INSTANT CASH BACK UPTO 9,000/- STARTS FROM - 38,500/-*
BOSCH 6.5 KG INSTANT CASH BACK UPTO 3,000/- STARTS FROM - 17,000/-*
Whirlpool 6.5 KG INSTANT CASH BACK UPTO 2,000/- STARTS FROM - 15,300/-*
SAMSUNG 192 LTR CASH BACK AVAILABLE + GIFT STARTS FROM - 12,690/-*
LG 190 LTR CASH BACK AVAILABLE + GIFT STARTS FROM - 13,900/-*
Whirlpool 190 LTR CASH BACK AVAILABLE + GIFT STARTS FROM - 14,900/-*
Godrej 190 LTR CASH BACK AVAILABLE + GIFT STARTS FROM - 12,900/-*
Haier 190 LTR CASH BACK AVAILABLE + GIFT STARTS FROM - 12,900/-*
BOSCH CHIMNY HOB + STARTS FROM - 35,000/-*
FABER CHIMNY HOB + STARTS FROM - 22,000/-*
SAMSUNG LG Godrej STARTS FROM - 4,999/-*
morphy richards smart ideas for your home BAJAJ STARTS FROM - 3,999/-*
LLOYD MITSUBISHI ELECTRIC Cooling and Heating Solutions DAIKIN STARTS FROM - 23,999/-* + FREE INSTALLATION
PHILIPS UPTO 15% OFF APPLIANCES
PHILIPS BOSCH Preethi BAJAJ Panasonic ideas for life UPTO 40% OFF MIXER GRINDER
BAJAJ Prestige UPTO 40% OFF WET GRINDER
WATER PURIFIER KENT EUREKA FORBES BLUE STAR UPTO 25% OFF
COOKWARE COOKER UPTO 25% OFF TAVA
*T&C APPLY
SONY SAMSUNG BOSCH Haier LG Whirlpool Godrej IFB PHILIPS KENT EUREKA FORBES FABER
Eswar
SRI MARULASIDDESHWARA COMPLEX NH-13, NEAR BUS-STAND
CHANNAGIRI - +91 90086 63411
# 8 & 9, SRI MURUGARAJENDRA COMPLEX,
OPP. JAYADEVA PETROL BUNK, HADADI ROAD,
DAVANGERE - 08192 253411 | +91 90088 33411

# ಸಾಂಸ್ಕೃತಿಕ, ಶೈಕ್ಷಣಿಕ ವಲಯದಲ್ಲಿ ವಿಶಿಷ್ಟ ಛಾಪು ಮೂಡಿಸಿದ ತರಳಬಾಳು ಮಠ

ಸಾಣೇಹಳ್ಳಿ, ನ.2- ತರಳಬಾಳು ಮಠ ಅಧ್ಯಾತ್ಮ ಸಾಂಸ್ಕೃತಿಕ, ಶೈಕ್ಷಣಿಕ ವಲಯದಲ್ಲಿ ತನ್ನದೇ ಆದ ವಿಶಿಷ್ಟ ಛಾಪು ಮೂಡಿಸಿದೆ. ಸಾಣೇಹಳ್ಳಿ ಶಾಖಾ ಮಠ ಮೂಲ ಮಠದ ಆಶಯಕ್ಕೆ ತಕ್ಕಂತೆ ಕೆಲಸ ಮಾಡುತ್ತಿದೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು.

ಸಾಣೇಹಳ್ಳಿ ಶ್ರೀ ಶಿವಕುಮಾರ ಕಲಾಸಂಘದ ವತಿಯಿಂದ ಬಯಲು ರಂಗಮಂದಿರದಲ್ಲಿ ಆಯೋಜಿಸಿರುವ ನಾಟಕೋತ್ಸವ ಕಾರ್ಯಕ್ರಮದಲ್ಲಿ ಸಿಜಿಕೆ ನುಡಿ ಚಿತ್ರ ಟಂಕಸಾಲೆ ಉದ್ಘಾಟಿಸಿ ಅವರು ಮಾತನಾಡಿದರು.

ಕುಗ್ರಾಮ ಸಾಣೇಹಳ್ಳಿಯನ್ನು ಸಾಂಸ್ಕೃತಿಕ ಕೇಂದ್ರವನ್ನಾಗಿ ಮಾಡುವಲ್ಲಿ ಪಂಡಿತಾರಾಧ್ಯ ಶ್ರೀಗಳ ಶ್ರಮ, ಬದ್ಧತೆ ಹೆಚ್ಚಿನದಾಗಿ ಕಂಡುಬರುತ್ತಿದೆ. ಸಾಮಾಜಿಕ ಬದಲಾವಣೆ ತರುವಲ್ಲಿ ನಾಟಕಗಳು ಪ್ರಬಲ ಮಾಧ್ಯಮ ಎಂದು ಅರಿತು ನಾಟಕ ಚಳವಳಿಯನ್ನೇ ಆರಂಭಿಸಿದ್ದಾರೆ ಎಂದರು.

ನಾಟಕ ಕಲೆ ನಶಿಸಿ ಹೋಗುತ್ತಿರುವ ಈ ಸಂದರ್ಭದಲ್ಲಿ ಶ್ರೀಗಳ ವಿಶೇಷ ಪರಿಶ್ರಮದಿಂದ ರಂಗಕಲೆ ಬೆಳೆಯುತ್ತಿದೆ. ಶಿವಸಂಚಾರ ನಾಟಕ ತಂಡ ನಮ್ಮ ನಾಡಿನ ಸಂಸ್ಕೃತಿಯನ್ನು ಎಲ್ಲೆಡೆ ಪರಿಚಯಿಸುತ್ತಿದೆ. ಶರಣ ಸಂಸ್ಕೃತಿಯ ಹೊಸ ಕಲ್ಪನೆಯನ್ನು ಕಟ್ಟಿಕೊಡುವಲ್ಲಿ ಯಶಸ್ವಿಯಾಗಿದೆ ಎಂದ ಹೇಳಿದರು.



ಸಿಜಿಕೆ ನುಡಿ ಚಿತ್ರ ಟಂಕಸಾಲೆ ಭಾರತದ ಗ್ರಾಮೀಣ ಪ್ರದೇಶದಲ್ಲಿಯೇ ವಿನೂತನವಾದುದು. ಕಲೆಗಳು ಮನೋರಂಜನೆ ಜೊತೆಗೆ ನೆಮ್ಮದಿಯ ಬದುಕನ್ನು ಕಟ್ಟಿಕೊಡುವಲ್ಲಿ ಸಹಕಾರಿಯಾಗಿವೆ ಎಂದರು.

ಕರ್ನಾಟಕ ರಾಜ್ಯೋತ್ಸವವನ್ನು ದೀಪ ಹಚ್ಚುವ ಮೂಲಕ ಉದ್ಘಾಟಿಸಿದ ಕವಿ ಡಾ. ದೊಡ್ಡರಂಗೇಗೌಡ ಅವರು, ಕನ್ನಡ ಭಾಷೆ, ಸಂಸ್ಕೃತಿಯ ಬೇರುಗಳು ಆಳವಾಗಿ ಬೇರೂರಿವೆ.

## ಸಾಣೇಹಳ್ಳಿಯ ನಾಟಕೋತ್ಸವದಲ್ಲಿ ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ

ಇದನ್ನು ಯಾರೂ ನಾಶಪಡಿಸಲು ಸಾಧ್ಯವಿಲ್ಲ. ಕನ್ನಡಿಗರು ಒಳ್ಳೆಯವರಿಗೆ ಒಳ್ಳೆಯವರು, ಕೆಟ್ಟವರಿಗೆ ಕೆಟ್ಟವರು. ಕನ್ನಡಿಗರ ಶೌರ್ಯ ಪರಂಪರೆಯನ್ನು ಇತಿಹಾಸದುದ್ದಕ್ಕೂ ಕಾಣಬಹುದು ಎಂದು ಹೇಳಿದರು.

12ನೇ ಶತಮಾನದ ವಚನಕಾರರ ವಚನಗಳು ವಿಶ್ವದಲ್ಲೇ ಹೊಸ ಬಗೆಯ ಜಾಗರೂಕತೆ, ಎಚ್ಚರವನ್ನುಂಟು ಮಾಡಿವೆ. ಬಸವಣ್ಣ ಸಮಾಜ ವಿಜ್ಞಾನಿ. ಅವರಷ್ಟು ಸುಧಾರಣೆ ಮಾಡಿದ ಸುಧಾರಕ ಇನ್ನೊಬ್ಬರಿಲ್ಲ ಎಂದರು.

ಕನ್ನಡಿಗರಲ್ಲಿ ಶೌರ್ಯ ದಟ್ಟವಾಗಿದೆ. ಸಾಣೇಹಳ್ಳಿಯಲ್ಲಿ 'ಸಾಂಸ್ಕೃತಿಕ ವಿಶ್ವವಿದ್ಯಾಲಯ' ತೆರೆಯುವಂತಾಗಲಿ. ಶ್ರೀಮಠ ಮತ್ತೊಂದು ಸಿದ್ಧಗಂಗಾ ಮಠದಂತೆ ಬೆಳೆಯಲಿ ಎಂದು ಆಶಿಸಿದರು.

ನಾಟಕೋತ್ಸವಕ್ಕೆ ಚಾಲನೆ ನೀಡಿದ ರಂಗಕರ್ಮಿ ಶ್ರೀನಿವಾಸ ಜಿ. ಕಪ್ಪಣ್ಣ ಅವರು, ಸಿಜಿಕೆಯವರಿಂದಾಗಿ ಶಿವಸಂಚಾರ ಮತ್ತು ಗ್ರೀಕ್ ಮಾದರಿಯ ರಂಗಮಂದಿರ ಸಾಣೇಹಳ್ಳಿಯಲ್ಲಿ ಮೈದಳೆಯುವಂತಾಯಿತು. ರಾಜ್ಯದ ಪ್ರಮುಖ ನಾಯಕರು ನಾಟಕೋತ್ಸವಕ್ಕೆ ಬರಲೇ ಬೇಕು ಎನ್ನುಷ್ಟರ ಮಟ್ಟಿಗೆ ಅಲಿಖಿತ ನಿಯಮವೇ ಆಗಿರುವುದು ಇಲ್ಲಿನ ಚಟುವಟಿಕೆಗಳಿಗೆ ಹಿಡಿದ ಕನ್ನಡಿಯಾಗಿದೆ ಎಂದರು.

ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಮಾತನಾಡಿ, ಲೋಕಕ್ಕೆ ಅನ್ನವನ್ನು ಕೊಡುವ ಶಕ್ತಿ ಇರುವುದು ಕೃಷಿಕನಿಗೆ ಮಾತ್ರ. ಆದರೆ ಕೃಷಿಕರಿಗೆ ಬೇಕಾದ ಸೌಲಭ್ಯಗಳನ್ನು ಕಲ್ಪಿಸುವ ಪ್ರಾಮಾಣಿಕ ಪ್ರಯತ್ನದ ಕೊರತೆ ಎದ್ದು ಕಾಣುತ್ತಿದೆ. ಕೃಷಿಕರನ್ನು ಉಪೇಕ್ಷೆ ಮಾಡಿದರೆ ಸರ್ಕಾರಗಳು ಉಳಿಯಲು ಸಾಧ್ಯವಿಲ್ಲ ಎಂದು ಹೇಳಿದರು.

ಬೆಂಗಳೂರಿನ ರಂಗಶಾಲಾ ಶಾಖೆಯ ನಿರ್ದೇಶಕಿ ವೀಣಾ ಶರ್ಮಾ ಭೂಸನೂರು ಮಠ, ರಾಜ್ಯ ಖನಿಜ ನಿಗಮದ ಅಧ್ಯಕ್ಷ ಎಸ್. ಲಿಂಗಮೂರ್ತಿ, ವಿಧಾನ ಪರಿಷತ್ ಸದಸ್ಯ ಎಸ್. ರುದ್ರೇಗೌಡ, ಚನ್ನಗಿರಿ ಶಾಸಕ ಮಾಡಾಳು ವಿರೂಪಾಕ್ಷಪ್ಪ ಮಾತನಾಡಿದರು.

# ನೀಟ್ ಪರೀಕ್ಷೆಯಲ್ಲಿ ಸರ್ ಎಂವಿ ವಿದ್ಯಾರ್ಥಿಗಳ ಅಪೂರ್ವ ಸಾಧನೆ



ದಾವಣಗೆರೆ, ನ.2- 2021 ರ ನೀಟ್ ಪರೀಕ್ಷೆಯ ಫಲಿತಾಂಶ ಪ್ರಕಟಗೊಂಡಿದ್ದು, ಸರ್ ಎಂವಿ ಪಿಯು ಕಾಲೇಜಿನ ವೆಂಕಟೇಶ್ ಜಿ.ಪಿ 720 ಕ್ಕೆ 677 ಅಂಕ ಗಳಿಸುವ ಮೂಲಕ ಅತ್ಯುತ್ತಮ ಸಾಧನೆಗೈದಿದ್ದಾರೆ. ರಾಜೇಂದ್ರ ಎಸ್.ಕೆ. ಕೆಟಗೆರಿ ವಿಭಾಗದಲ್ಲಿ 72ನೇ ರ್‍ಯಾಂಕ್ ಹಾಗೂ ಶಕ್ತಿಕುಮಾರಿ ಟಿ.ಆರ್. 92 ನೇ ರ್‍ಯಾಂಕ್ ಗಳಿಸಿದ್ದಾರೆ. ಕಾಲೇಜಿನ 20 ಕ್ಕೂ ಹೆಚ್ಚು ವಿದ್ಯಾರ್ಥಿಗಳು 600 ಕ್ಕೂ ಹೆಚ್ಚಿನ ಅಂಕ ಗಳಿಸಿದ್ದಾರೆ. ಸುಮಾರು 200 ವಿದ್ಯಾರ್ಥಿಗಳು ಸರ್ಕಾರಿ ಕೋಟಾದಲ್ಲಿ ವೈದ್ಯಕೀಯ ಶಿಕ್ಷಣ ಪ್ರವೇಶ ಗಳಿಸುವ ನಿರೀಕ್ಷೆ ಹೊಂದಲಾಗಿದೆ. ಸಾಧನೆ ಮೆರೆದ ಎಲ್ಲಾ ವಿದ್ಯಾರ್ಥಿಗಳಿಗೆ ಕಾಲೇಜಿನ ಆಡಳಿತ ಮಂಡಳಿ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಅಭಿನಂದಿಸಿದ್ದಾರೆ.

## ನೀಟ್ : ಸಿದ್ಧಗಂಗಾ ಮಕ್ಕಳ ಸಾಧನೆ

ದಾವಣಗೆರೆ, ನ.2- ನಗರದ ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ ವಿದ್ಯಾರ್ಥಿಗಳು ಈ ಸಾಲಿನ ನೀಟ್ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ.ವಿದ್ಯಾರ್ಥಿಗಳಾದ ಎಸ್. ಹರ್ಷಿತ್ 720 ಕ್ಕೆ 659 ಅಂಕಗಳನ್ನು ಪಡೆದು, ರಾಷ್ಟ್ರಮಟ್ಟದಲ್ಲಿ 2,800 ನೇ ರ್‍ಯಾಂಕ್ ಗಳಿಸಿದ್ದಾನೆ. ಕೆ.ಎಸ್. ಅಭಿಲಾಷ 654 ಅಂಕಗಳ ಮೂಲಕ 3,428 ನೇ ರ್‍ಯಾಂಕ್, ಕೆ.ವಿ. ದರ್ಶನ್ 610, ಬಿ.ಪಿ. ಚಂದನ 586, ಎಂ.ಎನ್. ಮಂಜುನಾಥ್ 585, ಪವನ್ ಸಿ. ಗೌಳಿ 578 ಅಂಕಗಳನ್ನು ಪಡೆದಿದ್ದಾರೆ.

## ಇಂದು ಮಾನಸಿಕ ಆರೋಗ್ಯ ಶಿಬಿರ

ದಾವಣಗೆರೆ: ನ್ಯೂ ಹಾರೊಜೋನ್ ಟ್ರಸ್ಟ್ ಫಾರ್ ದಿ ಡಿಸೇಬಲ್ಡ್ ಸಂಸ್ಥೆ ವತಿಯಿಂದ ನ.3ರ ಇಂದು ಬೆಳಿಗ್ಗೆ 10.30 ಕ್ಕೆ ಇಲ್ಲಿನ ಎಂಸಿಸಿ 'ಎ' ಬ್ಲಾಕ್‌ನಲ್ಲಿರುವ ಚರ್ಚ್‌ನಲ್ಲಿ ಸಾರ್ವಜನಿಕರಿಗೆ ಮಾನಸಿಕ ಆರೋಗ್ಯದ ಬಗ್ಗೆ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆ ತಿಳಿಸಿದೆ.

## ನಿಧಿ ಬೇತೂರ್‌ಗೆ ಬಂಗಾರದ ಪದಕ



ದಾವಣಗೆರೆ, ನ.2- ಭಾರತ ಸರ್ಕಾರದ ಯುವಜನ ಸೇವೆ ಹಾಗೂ ಕ್ರೀಡಾ ಸಚಿವಾಲಯದ ವತಿಯಿಂದ ಮೈಸೂರಿನಲ್ಲಿ ದಿ: 31-10-2021ರಂದು ಆಯೋಜಿಸಿದ್ದ 1ನೇ ರಾಜ್ಯಮಟ್ಟದ ಕಿಕ್ ಬಾಕ್ಸಿಂಗ್ ಸ್ಪರ್ಧೆಯಲ್ಲಿ ನಗರದ ನಿಧಿ ಬೇತೂರು 9 ವರ್ಷದೊಳಗಿನ ಹಾಗೂ 30 ಕೆ.ಜಿ. ಯೊಳಗಿನ ಜ್ಯೂನಿಯರ್ ವಿಭಾಗದಲ್ಲಿ ಸ್ಪರ್ಧಿಸಿ, ಪ್ರಥಮ ಸ್ಥಾನ ಗಳಿಸಿ, ಬಂಗಾರದ ಪದಕ ಪಡೆದಿದ್ದಾಳೆ. ನಿಧಿ ನಗರದ ಅಭಿಷೇಕ್ ಬೇತೂರು ಹಾಗೂ ಶ್ರೀಮತಿ ಶ್ವೇತಾ ದಂಪತಿ ಪುತ್ರಿ.

# ರೈಲ್ವೆ ಅಂಡರ್ ಪಾಸ್ ಸಮಸ್ಯೆ ನಿವಾರಣೆ, ಶೀಘ್ರ ಬಳಕೆಗೆ

ದಾವಣಗೆರೆ, ನ.2- ಪಾಲಿಕೆ ಎದುರಿಗಿರುವ ರೈಲ್ವೆ ಅಂಡರ್ ಪಾಸ್‌ನಲ್ಲಿ ನೀರಿನ ಸಮಸ್ಯೆ ಬಗೆಹರಿದಿದ್ದು, ಸಾರ್ವಜನಿಕರ ಬಳಕೆಗೆ ಶೀಘ್ರವೇ ನೀಡಲಾಗುವುದು ಎಂದು ಸಂಸದ ಡಾ. ಜಿ.ಎಂ. ಸಿದ್ದೇಶ್ವರ ಹೇಳಿದರು.

ಪಾಲಿಕೆ ಎದುರಿಗಿನ ರೈಲ್ವೆ ಕೆಳ ಸೇತುವೆ ಕಾಮಗಾರಿ ಪೂರ್ಣಗೊಂಡಿದ್ದು, ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಸಂಸದರು ಮಾತನಾಡಿದರು.

1971 ರಲ್ಲಿ ನಿರ್ಮಿಸಿದ ಈ ರೈಲ್ವೆ ಕೆಳ ಸೇತುವೆಯಲ್ಲಿ ನೀರು ನಿಲ್ಲುವ ಮೂಲಕ ಸಾಕಷ್ಟು ಸಮಸ್ಯೆ ಆಗುತ್ತಿತ್ತು. ಈ ಬಗ್ಗೆ ಸಾರ್ವಜನಿಕರು ಅನೇಕ ಬಾರಿ ದೂರು ನೀಡಿದ್ದರು. ನಂತರ ಜಿಲ್ಲಾಧಿಕಾರಿ, ಮೇಯರ್ ಹಾಗೂ ಆಯುಕ್ತರ ಗಮನಕ್ಕೆ ತಂದು ಕಾಮಗಾರಿ ಪೂರ್ಣಗೊಳಿಸಲಾಗಿದೆ ಎಂದರು.

ಕಳೆದ ಎರಡು ತಿಂಗಳ ಹಿಂದೆ ಕಾಮಗಾರಿ ಪ್ರಾರಂಭಗೊಂಡಿತ್ತು. ಒಟ್ಟು 42 ಲಕ್ಷ ರೂ. ವೆಚ್ಚದಲ್ಲಿ ನೀರು ನಿಲ್ಲದಂತೆ ಕಾಮಗಾರಿ ಮಾಡಲಾಗಿದೆ. ಎರಡು ಕಡೆ ನಿಲ್ಲುತ್ತಿದ್ದ ನೀರನ್ನು ಒಂದೇ ತೊಟ್ಟಿಯಲ್ಲಿ ಸಂಗ್ರಹವಾಗುವಂತೆ

**ಸಂಸದ ಸಿದ್ದೇಶ್ವರ**

ಮಾಡಿದ್ದು, 10 ಹೆಚ್.ಪಿ. ಸಾಮರ್ಥ್ಯದ ಎರಡು ಸೆನ್ಸಾರ್ ಮೋಟರ್ ಅಳವಡಿಸಲಾಗಿದೆ ಎಂದು ತಿಳಿಸಿದರು.

ತೊಟ್ಟಿಯಲ್ಲಿ ನೀರು ತುಂಬಿದ ತಕ್ಷಣ ಸ್ವಯಂಚಾಲಿತವಾಗಿ ಕೆಳ ಸೇತುವೆ ಮೂಲಕ ಲಕ್ಷ್ಮಿ ವೃತ್ತದಲ್ಲಿರುವ ರಾಜ ಕಾಲುವೆಗೆ ನೀರು ಹರಿಯುವ ವ್ಯವಸ್ಥೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು. ರೈಲ್ವೆ ನಿಲ್ದಾಣದ ಒಂದು ಭಾಗ ಶಿಥಿಲವಾಗಿದ್ದು, ಅದನ್ನು ಸಹ ದುರಸ್ತಿ ಮಾಡಿಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದರು.

ಈ ಸಂದರ್ಭದಲ್ಲಿ ಮೇಯರ್ ಎಸ್.ಟಿ. ವೀರೇಶ್, ಉಪ ಮೇಯರ್ ಶಿಲ್ಪ ಜಯಪ್ರಕಾಶ್, ಸದಸ್ಯರಾದ ಕೆ. ಪ್ರಸನ್ನಕುಮಾರ್, ಉಮಾ ಪ್ರಕಾಶ್, ಯಶೋಧ ಹೆಗ್ಗಪ್ಪ, ರೇಣುಕಾ ಶ್ರೀನಿವಾಸ್, ವೀಣಾ ನಂಜಪ್ಪ, ಗೀತಾ ದಿಳ್ಳೆಪ್ಪ, ಪಾಲಿಕೆ ಆಯುಕ್ತ ವಿಶ್ವನಾಥ ಪಿ.ಮುದಜ್ಜಿ ಮತ್ತಿತರರಿದ್ದರು.



# ಹುಟ್ಟೂರಿಗೆ ಮರಳಿದ ಯೋಧ : ಸ್ವಾಗತ



ದಾವಣಗೆರೆ, ನ.2- ದೇಶ ರಕ್ಷಣೆ ಮಾಡುವಲ್ಲಿ ಉತ್ತಮ ಸೇವೆ ನೀಡಿ, ನಿವೃತ್ತಿಗೊಂಡು ಹುಟ್ಟೂರಿಗೆ ಮರಳಿದ ದಾವಣಗೆರೆ ಜಿಲ್ಲೆಯ ಹೆಮ್ಮೆಯ ಯೋಧನಿಗೆ ನಗರದಲ್ಲಿಂದು ಮೇಯರ್ ಎಸ್.ಟಿ. ವೀರೇಶ್ ನೇತೃತ್ವದಲ್ಲಿ ಅದ್ದೂರಿಯಾಗಿ ಸ್ವಾಗತಿಸಲಾಯಿತು.

18 ವರ್ಷ ಭಾರತೀಯ ಸೇನೆಯಲ್ಲಿ ಹವಾಲ್ದಾರ್ ಆಗಿ ಸೇವೆ ಸಲ್ಲಿಸಿ ನಿವೃತ್ತರಾಗಿ ಇಂದು ನಗರದ ರೈಲ್ವೆ ನಿಲ್ದಾಣಕ್ಕೆ ಬಂದಿಳಿದ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಮರಡಿ ಗ್ರಾಮದ ಯೋಧ ಎಂ.ಪಿ. ಕುಮಾರ್ ಅವರನ್ನು ಗೌರವಪೂರ್ವಕವಾಗಿ ಸ್ವಾಗತಿಸ ಲಾಯಿತು.

ನಿವೃತ್ತ ಯೋಧ ಎಂ.ಪಿ. ಕುಮಾರ್ ಅವರು ನೂರಾರು ಸೈನಿಕರಿಗೆ ತರಬೇತು ದಾರರಾಗಿದ್ದರೆಂದು ಹೇಳಲಾಗಿದೆ. ನಕ್ಸಲ್ ಆಪರೇಷನ್ ನಲ್ಲಿ ಈ ಯೋಧ ಪ್ರಮುಖ ಪಾತ್ರ ವಹಿಸಿದ್ದರು.

ಈ ಸಂದರ್ಭದಲ್ಲಿ ಹಿರಿಯ ಮುಖಂಡ ಬಿ.ಎಂ. ಸತೀಶ್, ದೂಡಾ ಮಾಜಿ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಪಾಲಿಕೆ ಸದಸ್ಯ ಪ್ರಸನ್ನಕುಮಾರ್ ಸೇರಿದಂತೆ, ಇತರರು ಇದ್ದರು.

# ರಾಜ್ಯೋತ್ಸವದಲ್ಲಿ ಗಮನ ಸೆಳೆದ ವೇಷಧಾರಿಗಳು




ಮಲೇಬೆನ್ನೂರು, ನ.2- ಜಿಗಳಿ ಗ್ರಾ.ಪಂ. ಕಛೇರಿ ಮತ್ತು ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 66ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಸಂಭ್ರಮದಿಂದ ಆಚರಿಸಲಾಯಿತು.

ಗ್ರಾ.ಪಂ. ಕಛೇರಿಯಲ್ಲಿ ಗ್ರಾ.ಪಂ. ಅಧ್ಯಕ್ಷೆ ಆಶಾ ಅಣ್ಣಪ್ಪ ಮತ್ತು ಸ.ಹಿ.ಪ್ರಾ. ಶಾಲೆಯಲ್ಲಿ ಎಸ್‌ಡಿಎಂಸಿ ಅಧ್ಯಕ್ಷ ಜಿ.ಆರ್. ಚಂದ್ರಪ್ಪ ಅವರು ತಾಯಿ ಭವನೇಶ್ವರಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು.

ಶಾಲೆಯಲ್ಲಿ ಜರುಗಿದ ವೇದಿಕೆ ಕಾರ್ಯಕ್ರಮದಲ್ಲಿ ಡಿಸಿಸಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಜಿ. ಆನಂದಪ್ಪ, ಗ್ರಾ.ಪಂ. ಸದಸ್ಯ ಕೆ.ಜಿ. ಬಸವರಾಜ್, ಶಿಕ್ಷಕರಾದ ನಾಗೇಶ್, ಮಲ್ಲಿಕಾರ್ಜುನ್, ಲಿಂಗರಾಜ್, ಗುಡ್ಡಪ್ಪ ಅವರು ಕನ್ನಡ ನಾಡು-ನುಡಿ ಕುರಿತು ಮಾತನಾಡಿದರು.

ಗ್ರಾ.ಪಂ. ಉಪಾಧ್ಯಕ್ಷ ಮಲ್ಲನಗೌಡ, ಗ್ರಾ.ಪಂ. ಸದಸ್ಯರಾದ ಡಿ.ಎಂ. ಹರೀಶ್, ಎನ್.ಎಂ. ಪಾಟೀಲ್, ವೈ.ಆರ್. ಚೇತನ್‌ಕುಮಾರ್, ವಿನೋದಮ್ಮ ಕರಿಯಮ್ಮ, ಮಂಜುಳಾ, ಪಿಡಿಓ ಉಮೇಶ್, ಕಾರ್ಯದರ್ಶಿ ಶೇಖರ್‌ನಾಯ್ಕ, ಶಾಲಾ ಮುಖ್ಯ ಶಿಕ್ಷಕ ಕರಿಬಸಪ್ಪ, ಶಿಕ್ಷಕರಾದ ಲೋಕೇಶ್, ದೀಪಾ, ಜಯಶ್ರೀ, ವೀಣಾ, ಕುಸುಮಾ, ಗ್ರಾಮದ ಮುಖಂಡರಾದ ಬಿ.ಎಂ. ದೇವೇಂದ್ರಪ್ಪ, ಡಾ. ಎನ್. ನಾಗರಾಜ್, ಎಕ್ಕೆಗೊಂದಿ ರುದ್ರಗೌಡ, ಜಿ.ಪಿ. ಹನುಮಗೌಡ, ಬಿ. ಬಾಲಪ್ಪ, ಕೆ.ಎಂ. ರಾಮಪ್ಪ, ಸಿ. ಪರಮೇಶ್ವರಪ್ಪ, ಪೂಜಾರ್ ನಾಗರಾಜ್, ಮಾಕನೂರು ಶಿವು, ಎಸ್‌ಡಿಎಂಸಿ ಸದಸ್ಯರಾದ ಡಿ.ಪಿ. ಚಿದಾನಂದ್, ಕರೇಗೌಡ್ರ ಪ್ರಕಾಶ್, ಮುತ್ತು ಮತ್ತು ಪತ್ರಕರ್ತ ಪ್ರಕಾಶ್ ಹಾಗೂ ಗ್ರಾಮಸ್ಥರು ಭಾಗವಹಿಸಿದ್ದರು.

ಶಾಲಾ ಮಕ್ಕಳು ಗಾಂಧೀಜಿ, ಒನಕೆ ಓಬವ್ವ, ಕಿತ್ತೂರು ರಾಣಿ ಚೆನ್ನಮ್ಮ, ಅಂಬೇಡ್ಕರ್, ಬಸವಣ್ಣ, ಭುವನೇಶ್ವರಿ ವೇಷಧಾರಿಗಳಾಗಿ ಗಮನ ಸೆಳೆದರು.

# ಸಾಣೇಹಳ್ಳಿಯಲ್ಲಿ ಇಂದು

ಹೊಸದುರ್ಗ ತಾಲ್ಲೂಕು ಸಾಣೇಹಳ್ಳಿಯಲ್ಲಿ ಶಿವಸಂಚಾರ ನಾಟಕೋತ್ಸವದ ಬೆಳ್ಳಿಹಬ್ಬದ ಅಂಗವಾಗಿ ಇಂದು ಸಂಜೆ 6 ಕ್ಕೆ ಕಾರ್ಯಕ್ರಮ ನಡೆಯಲಿದೆ. ನಾಗನೂರು-ಬೆಳಗಾವಿ ರುದ್ರಾಕ್ಷಿಮಠದ ಡಾ. ಅಲ್ಲಮಪ್ರಭು ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಬೆಂಗಳೂರು ಸಿಐಡಿ ಎಸ್ಪಿ ರವಿ ಡಿ. ಚನ್ನಣ್ಣನವರ್ 'ಯುವ ಪೀಳಿಗೆಯ ಜವಾಬ್ದಾರಿ' ಕುರಿತು ಮಾತನಾಡಲಿದ್ದಾರೆ.

ಅತಿಥಿಗಳಾಗಿ ಸಣ್ಣ ನೀರಾವರಿ, ಕಾನೂನು, ಸಂಸದೀಯ ವ್ಯವಹಾರ ಸಚಿವ ಜೆ.ಸಿ. ಮಾಧುಸ್ವಾಮಿ, ಸಂಸದ ಜಿ.ಎಂ. ಸಿದ್ದೇಶ್ವರ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಶಾಸಕರಾದ ಡಿ.ಎಸ್. ಸುರೇಶ್, ಟಿ. ರಘುಮೂರ್ತಿ, ವೈ.ಎ. ನಾರಾಯಣಸ್ವಾಮಿ, ಚಿತ್ರದುರ್ಗ ಸಿಇಓ ಡಾ. ಕೆ. ನಂದಿನಿದೇವಿ ಭಾಗವಹಿಸಲಿದ್ದಾರೆ. ಚಿಂತಕ ಎಸ್.ಜಿ. ಸಿದ್ಧರಾಮಯ್ಯ ಅವರ 'ಕ್ರಾಂತಿಯ ಹೆಜ್ಜೆಗಳು' ಕೃತಿ ಲೋಕಾರ್ಪಣೆಗೊಳ್ಳಲಿದೆ. ಸಾಣೇಹಳ್ಳಿ ಶ್ರೀ ಶಿವಕುಮಾರ ಸ್ವಾಮೀಜಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಂದ ನೃತ್ಯ ರೂಪಕ ಪ್ರದರ್ಶನಗೊಳ್ಳಲಿದೆ. ಕೆ.ವಿ. ಶಂಕರೇಗೌಡ ರಚಿಸಿದ ಪ್ರಮೋದ್ ಶಿಗ್ಗಾಂವ್ ನಿರ್ದೇಶನದ, ಮಂಡ್ಯದ ಜನದನಿ ಕಲಾವಿದರು ಅಭಿನಯಿಸಿರುವ 'ಪಾದುಕ ಕಿರೀಟ' ನಾಟಕ ಪ್ರದರ್ಶನವಾಗಲಿದೆ.

## ನಗರದಲ್ಲಿ ಇಂದು ಪ್ರತಿಭಟನೆ

ದಾವಣಗೆರೆ : ದಲಿತರು ಹೊಟ್ಟೆಪಾಡಿಗೆ ಬಿಜೆಪಿಗೆ ಹೋಗಿದ್ದಾರೆಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ನೀಡಿರುವ ಹೇಳಿಕೆ ಖಂಡಿಸಿ, ಜಿಲ್ಲಾ ಬಿಜೆಪಿ ಎಸ್.ಸಿ. ಘಟಕದ ಅಧ್ಯಕ್ಷ ಎನ್. ಹನುಮಂತನಾಯ್ಕ್ ಅವರ ಅಧ್ಯಕ್ಷತೆಯಲ್ಲಿ ಇಂದು ಬೆಳಿಗ್ಗೆ 10.30 ಕ್ಕೆ ನಗರದ ಅಂಬೇಡ್ಕರ್ ವೃತ್ತದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.


**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಸೈಟುಗಳು ಮಾರಾಟಕ್ಕಿವೆ**
60×40 NORTH ಸಿದ್ದವೀರಪ್ಪ ಬಡಾವಣೆಯಲ್ಲಿ, 50×68 CORNER ಆಂಜನೇಯ ಬಡಾವಣೆಯಲ್ಲಿ, 70×62 CORNER, 40×56 NORTH ಡಾಲರ್ಸ್ ಕಾಲೋನಿಯಲ್ಲಿ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಶಿವಪಾರ್ವತಿ ಬಡಾವಣೆಯಲ್ಲಿ 30×50 ಪೂರ್ವ, 30×40 ಪಶ್ಚಿಮ, ಹೊಸ ಬನಶಂಕರಿ ಬಡಾವಣೆಯಲ್ಲಿ 30×50 ಉತ್ತರ, 30×50 ಪಶ್ಚಿಮ, ಡಾಲರ್ಸ್ ಕಾಲೋನಿ 30×50 ದಕ್ಷಿಣ, 30×40 ಉತ್ತರ,
ಸ್ವಾಮಿ ಏಜೆಂಟ್ (ವಿದ್ಯಾನಗರ)
97421 44715

**ಮನೆ ಬಾಡಿಗೆಗೆ, ಲೀಸ್‌ಗೆ ಬೇಕೇ ? ಅಥವಾ ನಿಮ್ಮ ಮನೆ ಬಾಡಿಗೆಗೆ, ಲೀಸ್‌ಗೆ ಇದೆಯೇ ? ತಿಳಿಸಿ, ನಾವು ಕೊಡಿಸುತ್ತೇವೆ.**
ಕಿರಣ್ ಬೂಸ್ನೂರ್ (ಏಜೆಂಟ್)
98440 63409, 97315 63409

**ಕಂದಾಯ ರಶೀದಿ ಕಳೆದಿದೆ**
ಶ್ರೀಮತಿ ರಾಧಾ ತಾನೋಜಿರಾವ್ 6ನೇ ಕ್ರಾಸ್, ಶ್ರೀನಿವಾಸ ನಗರ ದಾವಣಗೆರೆ ವಾಸಿಯಾದ ನಾನು ಶ್ರೀನಿವಾಸ ನಗರ 6ನೇ ಕ್ರಾಸ್‌ನಲ್ಲಿ ನನ್ನ ಮಾಲೀಕತ್ವದಲ್ಲಿರುವ ಡೋ. ನಂ. 1674/11ರ ಸ್ವತ್ತಿಗೆ ಸಂಬಂಧಿಸಿದ 1996 ರಿಂದ 2019ರವರೆಗೆ ಕಂದಾಯ ಪಾವತಿ ರಸೀದಿಗಳನ್ನು ದಾವಣಗೆರೆ ಮಹಾನಗರ ಪಾಲಿಕೆಯಲ್ಲಿ ಅಪ್‌ಡೇಟ್ ಮಾಡಲು ಹೋದಾಗ ಕಳೆದು ಹೋಗಿರುತ್ತವೆ. ಯಾರಿಗಾದರೂ ಸಿಕ್ಕಲ್ಲಿ ಈ ಕೆಳಗಿನ ದೂರವಾಣಿಗೆ ತಿಳಿಸಲು ಕೋರಿದೆ.
98443 60252
98800 64641

**ಬೇಕಾಗಿದ್ದಾರೆ**
DTP ಆಪರೇಟರ್ (ಮಹಿಳೆಯರಿಗೆ ಮಾತ್ರ)
Kannada/English office work also.
Office boys ಕೆಲಸಕ್ಕಾಗಿ ಹುಡುಗರು ಬೇಕಾಗಿದ್ದಾರೆ.
97391 92779

**ಸೈಟುಗಳು ಮಾರಾಟಕ್ಕಿವೆ**
ವಿದ್ಯಾರ್ಥಿ ಭವನ ಹತ್ತಿರ ಹರ್ಷ ಬಾರ್ ಹಿಂಭಾಗದಲ್ಲಿ 30×40 South, 30×40 Corner, 30×40, 30×40 South ಅಕ್ಕ-ಪಕ್ಕ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಮನೆಗಳು ಬಾಡಿಗೆಗೆ/ಲೀಸ್‌ಗಿವೆ**
ಸಿಂಗಲ್ ಬೆಡ್ ರೂಂ ವಿದ್ಯಾನಗರ, ತರಳಬಾಳು ಬಡಾವಣೆ, ಆಂಜನೇಯ ಬಡಾವಣೆ 1/2 ಪರ್ಸೆಂಟ್ ಕಮೀಷನ್ ಆಧಾರದ ಮೇಲೆ
ಸ್ವಾಮಿ ಏಜೆಂಟ್ (ವಿದ್ಯಾನಗರ)
97421 44715

**ಮಳಿಗೆ ಬಾಡಿಗೆಗೆ ವಿಚಾರಿಸಿ**
ವಿದ್ಯಾರ್ಥಿ ಭವನ ಹತ್ತಿರ (ಸುಕೋ ಬ್ಯಾಂಕ್ ಹಿಂಭಾಗ) 10×15 ಅಳತೆಯ ಮಳಿಗೆ ಆಫೀಸ್ ಮತ್ತು ಗೋಡೌನ್‌ಗೆ ಅನುಕೂಲವಿರುವ ಮಳಿಗೆ ಬಾಡಿಗೆಗೆ ಇದೆ ವಿಚಾರಿಸಿ.
98454 66995

**ಬೇಕಾಗಿದ್ದಾರೆ**
ಕನ್ನಡಕದ ಅಂಗಡಿಯಲ್ಲಿ ಅಟೆಂಡರ್ ಬೇಕಾಗಿದ್ದಾರೆ. ಸಂಪರ್ಕಿಸಿ
ಲುಕ್ಸ್ ಕನ್ನಡಕ ಅಂಗಡಿ
8762333702
97392 94950

**ಸೈಟು ಮಾರಾಟಕ್ಕಿದೆ**
ನಗರದ ಎಂ.ಸಿ.ಸಿ.'ಬಿ' ಬ್ಲಾಕ್ ನ ಬಾಪೂಜಿ ಹೈಸ್ಕೂಲ್ ಪಕ್ಕದಲ್ಲಿ ಹಾದುಹೋಗುವ 21ನೇ ಮುಖ್ಯ ರಸ್ತೆಗೆ 40x60 ಅಡಿ ಅಳತೆಯ ದಕ್ಷಿಣ ದಿಕ್ಕಿನ ಸೈಟು ಮಾರಾಟಕ್ಕಿದೆ.
ಆಸಕ್ತರು ನೇರವಾಗಿ ಸಂಪರ್ಕಿಸಿ :
Mohan Real Estate Agencies
Mob : 97424 34049

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಶಿಕ್ಷಕಿಯರು ಬೇಕಾಗಿದ್ದಾರೆ**
D.Ed, B.Sc, B.Ed, B.Com, M.Com, M.Sc, any Degree. English Teacher's Salary: 8,000 to 10,000, Address: Little Champs Gurukulam, Near HKR Circle College Road Nittuvalli, Davangere
90609 06039, 98443 32559

**WANTED**
Analytical Chemist to handle Laboratory (HPLC, GC, AAS,etc), Experienced Tally operating, Lady Accountant needed for reputed company.
Rigved Scientific Organics Davanagere.
Whatsapp Resume and Call
99863 66358

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಸೇಲ್ಸ್ ಮನ್ / ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
ಸಂಪರ್ಕಿಸಿ: ಆಮಂತ್ರಣ
ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ.
97400 01117

**ಸೈಟು ಮಾರಾಟಕ್ಕಿದೆ**
ಹಾರ್ಟ್ ಹಾಸ್ಪಿಟಲ್ ರೋಡ್, ಎಂ.ಸಿ.ಸಿ 'ಬಿ' ಬ್ಲಾಕ್, 47×60 ಅಡಿ (ಪೂರ್ವ)
ಮೋಹನ್ಸ್ ರಿಯಲ್ ಎಸ್ಟೇಟ್ ಏಜೆನ್ಸೀಸ್
ಮೊ. : 97424 34049

**ಶ್ರೀ ದುರ್ಗಾಂಬಿಕ ಹೋಂ ಕೇರ್ ಸರ್ವೀಸ್**
ನಮ್ಮಲ್ಲಿ ವಯೋವೃದ್ದರನ್ನು ನೋಡಿಕೊಳ್ಳಲು ಆಯಾಗಳನ್ನು ಕಳುಹಿಸುತ್ತೇವೆ.
ವಯೋವೃದ್ದರನ್ನು ನೋಡಿಕೊಳ್ಳಲು ಯುವಕ, ಯುವತಿಯರು ಬೇಕಾಗಿದ್ದಾರೆ.
(ಊಟ, ವಸತಿ ವ್ಯವಸ್ಥೆ ಇರುತ್ತದೆ.)
ಫೋ. : 96062 82814

**ಮನೆ ಮಾರಾಟಕ್ಕಿದೆ**
ಡಿ.ಸಿ.ಎಂ. ಟೌನ್‌ಶಿಪ್‌ನ 4ನೇ 'ಬಿ' ಕ್ರಾಸ್‌ನಲ್ಲಿ ಕಟ್ಟಿಸಿರುವ 30x40 ಅಡಿಗಳ ಅಳತೆಯ 'ಶ್ರೀ ವಿನಾಯಕ ಕೃಪ' ಡೂಪ್ಲೆಕ್ಸ್ ಮನೆ ಮಾರಾಟಕ್ಕಿದೆ.
ಸಂಪರ್ಕಿಸಿ :
70224 60467

**ಬೇಕಾಗಿದ್ದಾರೆ**
ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ:
ಅಮರಾವತಿ ಹಾಲಪ್ಪ
98454 84076

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**HOUSE FOR RENT**
Single/Double Bed Room House. # 678/10- B, Shivakumar swamy nagar, 2nd stage, 4th Cross,
A.G.Prabushankar, Naveen Prabhu
91640 41134, 70199 66883

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Near Coffee day, Nutana College Road, Vidyanagara, 2nd Main, Davangere
77603 16576
90080 55813

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯಿತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 95135 79130, 80509 52637

**ದಿ ದಾವಣಗೆರೆ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ಲಿ.,**
DAVANAGERE
ಪ್ರಧಾನ ಕಛೇರಿ : ಪೋಸ್ಟ್ ಬಾಕ್ಸ್ ನಂ. 217, ಪಿ.ಬಿ. ರಸ್ತೆ, ದಾವಣಗೆರೆ- 577002
**ಬ್ಯಾಂಕಿನ ಸದಸ್ಯರಿಗೂ, ಠೇವಣಿದಾರರಿಗೂ, ಗ್ರಾಹಕರಿಗೂ ಹಾಗೂ ಹಿತೈಷಿಗಳಿಗೂ ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು**
ಮಾನ್ಯ ಸದಸ್ಯರಲ್ಲಿ ಈ ಮೂಲಕ ವಿನಂತಿಸಿಕೊಳ್ಳುವುದೇನೆಂದರೆ 2021-21ನೇ ಸಾಲಿನ ಡಿವಿಡೆಂಡನ್ನು ಈಗಾಗಲೇ ಬ್ಯಾಂಕಿನಲ್ಲಿ ಖಾತೆ ಹೊಂದಿರುವ ಸದಸ್ಯರ ಖಾತೆಗಳಿಗೆ ಜಮಾ ಮಾಡಲಾಗಿರುತ್ತದೆ. ಖಾತೆ ಹೊಂದಿಲ್ಲದ ಸದಸ್ಯರು, ಕೂಡಲೇ ಹತ್ತಿರದ ಶಾಖೆಗಳಲ್ಲಿ ತಮ್ಮ ಖಾತೆ ಪ್ರಾರಂಭಿಸಿ, ಖಾತೆಯ ಮಾಹಿತಿ ನೀಡಿದಲ್ಲಿ ಲಾಭಾಂಶವನ್ನು ಜಮಾ ಮಾಡಲು ಅನುಕೂಲವಾಗುತ್ತದೆ. ಇಲ್ಲವಾದಲ್ಲಿ ಬ್ಯಾಂಕಿನ ಉಪವಿಧಿ ಪ್ರಕಾರ 3 ವರ್ಷಗಳಿಂದ ಪಡೆಯದಿರುವ ಡಿವಿಡೆಂಡನ್ನು ರಿಸರ್ವ್ ಫಂಡಿಗೆ ವರ್ಗಾವಣೆ ಮಾಡಲಾಗುತ್ತದೆ. ಆದ್ದರಿಂದ ತಾವು ಕೂಡಲೇ ಖಾತೆಯನ್ನು ಪ್ರಾರಂಭಿಸಿ, ಡಿವಿಡೆಂಡನ್ನು ಪಡೆಯಲು ಈ ಮೂಲಕ ಕೋರಿದೆ.
ಕೋಗುಂಡಿ ಬಕ್ಕೇಶಪ್ಪ, ಅಧ್ಯಕ್ಷರು | ಅಂದನೂರು ಮುಪ್ಪಣ್ಣ, ಉಪಾಧ್ಯಕ್ಷರು | ಡಿ.ವಿ ಆರಾಧ್ಯಮಠ್, ಪ್ರಧಾನ ವ್ಯವಸ್ಥಾಪಕರು

**WANTED**
for Dry fruits shop
Sales Boys
Billing Staff (Ladies) with computer knowledge
94484 54709
99007 08999

**ಸೈಟ್ ಮಾರಾಟಕ್ಕಿದೆ**
ಪೂರ್ವ- ಉತ್ತರ ಕಾರ್ನರ್ 870 Sqft ರಶ್ಮಿ ಸ್ಕೂಲ್ ಕೆಳಗಡೆ ಸೈಟ್ ಮಾರಾಟಕ್ಕಿದೆ.
90361 89699
72592 69940

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು ಇಂದು ದಿನಾಂಕ. 03.11.2021ರ ಬುಧವಾರದಂದು ಮಾತ್ರ ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ. SSLC, PUC Degree, Pharmacy & BHMS (Government & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ರಾಂ ಅಂಡ್ ಕೋ ಸರ್ಕಲ್, ಗಣೇಶ ದೇವಸ್ಥಾನದ ಹಿಂಭಾಗ, ಸೋಮು ಮೆಡಿಕಲ್ಸ್ ಮೇಲೆ, ದಾವಣಗೆರೆ.
87490 24789, 94837 64859

**DAP :Dil Se Delivery**
**ತಕ್ಷಣ ಬೇಕಾಗಿದ್ದಾರೆ**
1) ಡಿಲೆವರಿ ಬಾಯ್
2) ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್
7026127117
9380067441

**ಕೆಲಸಕ್ಕೆ ಬೇಕಾಗಿದ್ದಾರೆ**
ಮ್ಯಾನುಯಲ್ ಬಿಲ್ ಬರೆಯಲು ಮತ್ತು ಸಾಮಾನು ಕೊಡಲು ಹುಡುಗರು ಬೇಕಾಗಿದ್ದಾರೆ.
ಹರ್ಷ ಹಾರ್ಡ್ ವೇರ್ & ಪೈಂಟ್ಸ್,
ಸುಭಾಷ್ ರಸ್ತೆ, ಅಶೋಕ ಚಿತ್ರ ಮಂದಿರ ಎದುರು, ರೈಲ್ವೆ ಗೇಟ್ ಹತ್ತಿರ ದಾವಣಗೆರೆ-577001

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಮ್ಯಾನೇಜರ್ ಹಾಗೂ ಸೇಲ್ಸ್ ಬಾಯ್ ಬೇಕಾಗಿದ್ದಾರೆ.
ಆಕರ್ಷಕ ಸಂಬಳ ಕೊಡಲಾಗುವುದು. ಸಂಪರ್ಕಿಸಿ
70583 75375

**ಬಟ್ಟೆ ಅಂಗಡಿ ಮಾರುವುದಿದೆ**
ಸುಸಜ್ಜಿತವಾದ ಹಾಲಿ ನಡೆಯುತ್ತಿರುವ ಮಹಿಳೆಯರ ಸೀರೆಗಳು, ಕುರ್ತೀಸ್, ಡ್ರೆಸ್ ಮೆಟೀರಿಯಲ್ಸ್ ಇರುವ ಬಟ್ಟೆ ಅಂಗಡಿ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ
99023 76642

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಬುಧವಾರ, ನವೆಂಬರ್ 03, 2021




# ಗ್ರಾ.ಪಂಗಳಿಗೆ 48 ಸ್ವಚ್ಛತಾ ವಾಹನ ವಿತರಣೆ

## 2.62 ಕೋಟಿ ರೂ. ವೆಚ್ಚದ ವಾಹನಗಳನ್ನು ವಿತರಿಸಿದ ಸಚಿವ ಕೆ.ಎಸ್. ಈಶ್ವರಪ್ಪ

ದಾವಣಗೆರೆ, ನ.2- ತಾಲ್ಲೂಕಿನ 12 ಗ್ರಾಮ ಪಂಚಾಯತಿ, ಹರಿಹರ ತಾಲ್ಲೂಕಿನ 19 ಗ್ರಾಮ ಪಂಚಾಯಿತಿ ಹಾಗೂ ಚನ್ನಗಿರಿ ತಾಲ್ಲೂಕಿನ 17 ಗ್ರಾಮ ಪಂಚಾಯತಿಗಳಿಗೆ ಸ್ವಚ್ಛ ಭಾರತ ಮಿಷನ್ ಯೋಜನೆಯಡಿ ಸುಮಾರು 262.08 ಲಕ್ಷ ರೂಪಾಯಿ ವೆಚ್ಚದಲ್ಲಿ ಒಟ್ಟು 48 ಸ್ವಚ್ಛತಾ ವಾಹನಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್.ಈಶ್ವರಪ್ಪ ವಿತರಿಸಿದರು.

ನಗರದ ಜಿಲ್ಲಾ ಪಂಚಾಯತ್ ಆವರಣದಲ್ಲಿ ಮಂಗಳವಾರ ವಿವಿಧ ಕಾರ್ಯಕ್ರಮಗಳಿಗೆ ಚಾಲನೆ ನೀಡಿದ ಬಳಿಕ ಮಾತನಾಡಿದ ಅವರು, ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ ವತಿಯಿಂದ ಗ್ರಾ. ಪಂ ಮಟ್ಟದಲ್ಲಿ ಸ್ವಚ್ಛ ಸಂಕೀರ್ಣ ಘಟಕದ ನಿರ್ವಹಣೆ ವಹಿಸಿಕೊಂಡಿದೆ. ಕಸ ವಿಲೇವಾರಿ ಮಾಡುವುದು ಆಯಾ ಗ್ರಾಮ ಪಂಚಾಯಿತಿಗಳ ಜವಾಬ್ದಾರಿಯಾಗಿದ್ದು, ಹೊರಗುತ್ತಿಗೆ ಆಧಾರದ ಮೇಲೆ ಅದಕ್ಕೆ ಸಿಬ್ಬಂದಿ ನೇಮಕ, ತರಬೇತಿ, ವೇತನ ನೀಡಲಾಗುತ್ತದೆ ಎಂದರು.

ಘನ ತ್ಯಾಜ್ಯ ವಿಲೇವಾರಿ ನಿರ್ವಹಣೆ ದೃಷ್ಟಿಯಿಂದ ರಾಜ್ಯದಲ್ಲಿ ಕಸ ಸಂಗ್ರಹಣೆಗೆ ವಾಹನ ಖರೀದಿಸಲಾಗಿದೆ. ಅದಕ್ಕೆ ಮಹಿಳಾ ಚಾಲಕರೇ ಬೇಕೆಂದು ಅಪೇಕ್ಷೆ ವ್ಯಕ್ತವಾಗಿತ್ತು. ಅದಕ್ಕೆ ಅವಕಾಶ ಮಾಡಿಕೊಡಲಾಗಿದೆ ಎಂದರು.

> **ಮನೆಗಳನ್ನು ಸ್ವಚ್ಛವಾಗಿ ಇರಿಸಿಕೊಳ್ಳುವ ಮಹಿಳೆಯರು ಗ್ರಾಮವನ್ನೂ ಸ್ವಚ್ಛವಾಗಿ ಇರಿಸಿಕೊಳ್ಳಬಲ್ಲರು. ಆದ್ದರಿಂದ ವಾಹನ ಚಾಲನೆಗೆ ಮಹಿಳೆಯರನ್ನೇ ಆಯ್ಕೆ ಮಾಡಿಕೊಳ್ಳಲಾಗಿದೆ.**
> **- ಕೆ.ಎಸ್. ಈಶ್ವರಪ್ಪ, ಸಚಿವ**

ಮನೆ ಸ್ವಚ್ಛವಾಗಿ ಇರಿಸಿಕೊಳ್ಳುವ ಮಹಿಳೆಯರು ಗ್ರಾಮವನ್ನೂ ಸ್ವಚ್ಛವಾಗಿ ಇರಿಸಿಕೊಳ್ಳಬಲ್ಲರು. ಆದ್ದರಿಂದ ಹೆಣ್ಣುಮಕ್ಕಳಿಗಾಗಿ ಕೌಶಲ್ಯ ಕರ್ನಾಟಕದ ವತಿಯಿಂದ ಗ್ರಾ. ಪಂಚಾಯತಿ ವ್ಯಾಪ್ತಿಯ ಮಹಿಳೆಯರನ್ನು ಆಯ್ಕೆ ಮಾಡಿ ಅವರಿಗೆ ಮಾನ್ಯತೆ ಪಡೆದ ಚಾಲನಾ ತರಬೇತಿ ಸಂಸ್ಥೆ ವತಿಯಿಂದ ತರಬೇತಿ, ಡಿಎಲ್ ಸಹ ಕೊಡಿಸಲಾಗುತ್ತದೆ. ತರಬೇತಿ ಪಡೆದ ಮಹಿಳೆಯರು ಗ್ರಾ. ಪಂ ವ್ಯಾಪ್ತಿಯ ಎಲ್ಲ ಗ್ರಾಮಗಳಿಂದಲೂ ಕಸ ಸಂಗ್ರಹಿಸಿ ವಿಲೇವಾರಿ ಮಾಡಬೇಕು. ಕಸದಿಂದ ಬಂದ ಆದಾಯವನ್ನು ಸಿಬ್ಬಂದಿ, ವಾಹನ ವೆಚ್ಚಕ್ಕೆ ಬಳಸಿಕೊಳ್ಳಲು ಅವಕಾಶ ನೀಡಲಾಗಿದೆ ಎಂದು ತಿಳಿಸಿದರು.

ದಾವಣಗೆರೆ ತಾಲ್ಲೂಕಿನ 10 ಗ್ರಾ.ಪಂ, ಚನ್ನಗಿರಿ ತಾಲ್ಲೂಕಿನ 17 ಗ್ರಾ.ಪಂ, ಹರಿಹರ ತಾಲ್ಲೂಕಿನ 5 ಗ್ರಾ.ಪಂ ಹೊನ್ನಾಳಿ ತಾಲ್ಲೂಕಿನ 7 ಗ್ರಾ.ಪಂ, ನ್ಯಾಮತಿ ತಾಲ್ಲೂಕಿನ 3 ಗ್ರಾ.ಪಂ ಮತ್ತು ಜಗಳೂರು ತಾಲ್ಲೂಕಿನ 1 ಗ್ರಾ.ಪಂಚಾಯಿತಿಗಳಲ್ಲಿ ಸುಮಾರು 17 ಲಕ್ಷ ರೂಪಾಯಿ ವೆಚ್ಚದಲ್ಲಿ ಒಟ್ಟು 42 ಸ್ವಚ್ಛ ಸಂಕೀರ್ಣ ಘಟಕ ನಿರ್ಮಾಣವಾಗಿದ್ದು, ಉದ್ಘಾಟನೆಗೆ ಸಿದ್ಧವಾಗಿವೆ ಎಂದರು.

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಜಿಲ್ಲೆಯಲ್ಲಿ ಉಚಿತ ಸಹಾಯ ವಾಣಿ 18004252203 ಪ್ರಾರಂಭಿಸಿದ್ದು, ಇದೇ ವೇಳೆ ಸಚಿವರು ಇದಕ್ಕೆ ಸಂಬಂಧಿಸಿದ ಪೋಸ್ಟರ್ ಬಿಡುಗಡೆ ಮಾಡಿದರು.

ಈ ಸಂದರ್ಭದಲ್ಲಿ ಶಾಸಕರುಗಳಾದ ಎಸ್.ಎ.ರವೀಂದ್ರನಾಥ್, ಎಸ್.ವಿ.ರಾಮಚಂದ್ರ, ಪ್ರೊ. ಲಿಂಗಣ್ಣ, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಜಿ.ಪಂ. ಸಿಇಒ ವಿಜಯ ಮಹಾಂತೇಶ, ಉಪಕಾರ್ಯದರ್ಶಿ ಬಿ.ಆನಂದ್ ಸೇರಿದಂತೆ, ಮತ್ತಿತರರು ಪಾಲ್ಗೊಂಡಿದ್ದರು.

# ಹಾನಗಲ್ ಕೈ, ಸಿಂಧಗಿ ಕಮಲ

## ಉಪ ಚುನಾವಣೆ: ಕಾಂಗ್ರೆಸ್, ಬಿಜೆಪಿಗೆ 50-50, ಜೆಡಿಎಸ್‌ಗೆ ಠೇವಣಿ ನಷ್ಟ

ಬೆಂಗಳೂರು, ನ. 2- ರಾಜ್ಯದ ಸಿಂಧಗಿ ಮತ್ತು ಹಾನಗಲ್ ವಿಧಾನಸಭಾ ಕ್ಷೇತ್ರಗಳಿಗೆ ನಡೆದ ಉಪಚುನಾವಣೆಯಲ್ಲಿ ಆಡಳಿತಾರೂಢ ಬಿಜೆಪಿ ಮತ್ತು ಪ್ರತಿಪಕ್ಷ ಕಾಂಗ್ರೆಸ್ ತಲಾ ಒಂದು ಕ್ಷೇತ್ರಗಳಲ್ಲಿ ಜಯಭೇರಿ ಭಾರಿಸಿದರೆ, ಜೆಡಿಎಸ್ ಹೀನಾಯ ಸೋಲು ಕಂಡಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರತಿನಿಧಿಸುವ ಹಾವೇರಿ ಜಿಲ್ಲೆಯ ಹಾನಗಲ್ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಶ್ರೀನಿವಾಸ ಮಾನೆ, ತಮ್ಮ ಪ್ರತಿಸ್ಪರ್ಧಿ ಬಿಜೆಪಿಯ ಶಿವರಾಜ್ ಸಜ್ಜನ್ ಅವರನ್ನು 7,373 ಅಂತರದ ಮತಗಳಿಂದ ಪರಾಭವಗೊಳಿಸಿ, ವಿಧಾನಸಭೆಗೆ ಪ್ರಥಮ ಬಾರಿಗೆ ಆಯ್ಕೆಗೊಂಡಿದ್ದಾರೆ.

ವಿಜಯಪುರದ ಸಿಂಧಗಿ ಕ್ಷೇತ್ರಕ್ಕೆ ನಡೆದ ಉಪಚುನಾವಣೆಯಲ್ಲಿ ಬಿಜೆಪಿಯ ರಮೇಶ್ ಭೂಸನೂರ ತಮ್ಮ ಸಮೀಪ ಸ್ಪರ್ಧಿ ಕಾಂಗ್ರೆಸ್‌ನ ಅಶೋಕ್ ಮನಗೂಳಿ ಅವರನ್ನು 31,088 ಮತಗಳ ಅಂತರದಿಂದ ಪರಾಭವಗೊಳಿಸಿ ಭರ್ಜರಿ ಗೆಲುವು ಸಾಧಿಸಿದ್ದಾರೆ. ಹಾನಗಲ್ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿಯ ಹಿರಿಯ ನಾಯಕ ಹಾಗೂ ಮಾಜಿ ಸಚಿವ ಸಿ.ಎಂ. ಉದಾಸಿ ಅವರ ಅಕಾಲಿಕ ಮರಣದಿಂದ ತೆರವಾದ ಕ್ಷೇತ್ರಕ್ಕೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಜಯಭೇರಿ ಭಾರಿಸಿ ವಿಧಾನಸಭೆಯಲ್ಲಿ ಪಕ್ಷದ ಬಲಾಬಲವನ್ನು ಹೆಚ್ಚಿಸಿಕೊಂಡಿದೆ.

> **ಹಾನಗಲ್ ವಿಧಾನಸಭಾ ಕ್ಷೇತ್ರ**
> **ಶ್ರೀನಿವಾಸ ಮಾನೆ (ಕಾಂಗ್ರೆಸ್) 87,490.**
> **ಶಿವರಾಜ್ ಸಜ್ಜನರ್ (ಬಿಜೆಪಿ) 80,117.**
> **ನಯಾಜ್ ಶೇಕ್ (ಜೆಡಿಎಸ್) 927.**
> **ಶ್ರೀನಿವಾಸ ಮಾನೆ ಅವರು 7,373 ಮತಗಳ ಅಂತರದ ಗೆಲುವು ಸಾಧಿಸಿದ್ದಾರೆ.**
>
> **ಸಿಂಧಗಿ ವಿಧಾನಸಭಾ ಕ್ಷೇತ್ರ**
> **ರಮೇಶ್ ಭೂಸನೂರ (ಬಿಜೆಪಿ) 93,380.**
> **ಅಶೋಕ್ ಮನಗೂಳಿ (ಕಾಂಗ್ರೆಸ್) 62,680.**
> **ಅಂಗಡಿ ನಾಜಿಯಾ (ಜೆಡಿಎಸ್) 4,321**
> **ರಮೇಶ್ ಭೂಸನೂರ 31,185 ಮತಗಳ ಅಂತರದಿಂದ ಜಯಭೇರಿ ಭಾರಿಸಿದ್ದಾರೆ.**

ಮುಖ್ಯಮಂತ್ರಿ ಪ್ರತಿನಿಧಿಸುವ ಶಿಗ್ಗಾಂವ್ ಕ್ಷೇತ್ರಕ್ಕೆ ಹೊಂದಿಕೊಂಡಂತಿರುವ ಹಾನಗಲ್ ಕ್ಷೇತ್ರವನ್ನು ಉಳಿಸಿಕೊಳ್ಳಲು ಇಡೀ ಸರ್ಕಾರವೇ ಪ್ರಯತ್ನ ನಡೆಸಿದರೂ, ಸ್ಥಳೀಯ ಮತದಾರರು ಕಾಂಗ್ರೆಸ್‌ನ ಶ್ರೀನಿವಾಸ ಮಾನೆ ಕೈಹಿಡಿದಿದ್ದಾರೆ.

ಇದರಿಂದ ಬೊಮ್ಮಾಯಿ ಅವರಿಗೆ ದೊಡ್ಡ ಹಿನ್ನಡೆಯಾಗಿದ್ದರೂ ಸಿಂಧಗಿ ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿಯನ್ನು ದೊಡ್ಡ ಅಂತರದಲ್ಲಿ ಗೆಲ್ಲಿಸುವುದರ ಮೂಲಕ ಜೆಡಿಎಸ್ ಕ್ಷೇತ್ರವನ್ನು ಬಿಜೆಪಿ ಕಸಿದುಕೊಂಡಿದೆ.

ಇದರಿಂದ ವಿಧಾನಸಭೆಯಲ್ಲಿ ಬಿಜೆಪಿ ತನ್ನ ಸಂಖ್ಯಾ ಬಲವನ್ನು ಹಾಗೆಯೇ ಉಳಿಸಿಕೊಂಡಿದೆ.

ಜೆಡಿಎಸ್‌ನ ಹಿರಿಯ ನಾಯಕ ಹಾಗೂ ಮಾಜಿ ಸಚಿವ ಎಂ.ಸಿ. ಮನಗೂಳಿ ಸಿಂಧಗಿ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದರು.

ಅವರ ಅಕಾಲಿಕ ಮರಣದಿಂದ ತೆರವಾದ ಕ್ಷೇತ್ರಕ್ಕೆ ನಡೆದ (7ನೇ ಪುಟಕ್ಕೆ)

# ವಿಧಾನಸಭಾ ಉಪ ಚುನಾವಣೆಗಳಲ್ಲಿ ಕಾಂಗ್ರೆಸ್, ಬಿಜೆಪಿಗೆ ಮಿಶ್ರಫಲ

ನವದೆಹಲಿ, ನ. 2 – ದೇಶದ ಹಲವೆಡೆ 29 ವಿಧಾನಸಭಾ ಕ್ಷೇತ್ರಗಳಿಗೆ ನಡೆದ ಉಪ ಚುನಾವಣೆಯಲ್ಲಿ ಬಿಜೆಪಿ ಹಾಗೂ ಮಿತ್ರ ಪಕ್ಷಗಳು 11ರಲ್ಲಿ ಗೆಲುವು ಸಾಧಿಸಿವೆ ಹಾಗೂ ಕಾಂಗ್ರೆಸ್ 8 ಕ್ಷೇತ್ರಗಳಲ್ಲಿ ಗೆಲುವು ದಾಖಲಿಸಿದೆ. ಹಿಮಾಚಲ ಪ್ರದೇಶ ಹೊರತು ಪಡಿಸಿದರೆ ಬಹಳ ಕಡೆಗಳಲ್ಲಿ ಆಡಳಿತಾರೂಢ ಪಕ್ಷಗಳೇ ಮುನ್ನಡೆ ಗಳಿಸಿವೆ. ಹಿಮಾಚಲ ಪ್ರದೇಶದ ಎಲ್ಲಾ ಮೂರು ವಿಧಾನಸಭಾ ಕ್ಷೇತ್ರಗಳು ಹಾಗೂ ಪ್ರತಿಷ್ಠಿತ ಮಂಡಿ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಸೋಲು ಕಂಡಿದೆ.

ಪಶ್ಚಿಮ ಬಂಗಾಳದಲ್ಲಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ತೃಣಮೂಲ ಕಾಂಗ್ರೆಸ್ ಎಲ್ಲಾ ನಾಲ್ಕು ಕ್ಷೇತ್ರಗಳಲ್ಲಿ ಗೆಲುವು ದಾಖಲಿಸಿದ್ದು, ಶೇ.75.02ರಷ್ಟು ಮತಗಳನ್ನು ಪಡೆದಿದೆ.

> **ಅಸ್ಸಾಂ, ಮಧ್ಯ ಪ್ರದೇಶದಲ್ಲಿ ಬಿಜೆಪಿಗೆ ಮುನ್ನಡೆ, ನಾಲ್ಕು ರಾಜ್ಯಗಳಲ್ಲಿ ಕಾಂಗ್ರೆಸ್ ಮೇಲುಗೈ**

13 ರಾಜ್ಯಗಳಲ್ಲಿ ನಡೆದ ಚುನಾವಣೆ ಬಿಜೆಪಿ ಹಾಗೂ ಕಾಂಗ್ರೆಸ್‌ಗಳಿಗೆ ಮಿಶ್ರಫಲ ನೀಡಿದೆ. ರಾಜಸ್ಥಾನ, ಹಿಮಾಚಲಪ್ರದೇಶ ಹಾಗೂ ಕರ್ನಾಟಕಗಳಲ್ಲಿ ಕಾಂಗ್ರೆಸ್ ಮುನ್ನಡೆ ಕಂಡಿದೆ. ಆದರೆ ಅಸ್ಸಾಂ, ಮಧ್ಯ ಪ್ರದೇಶ ಹಾಗೂ ಮೇಘಾಲಯಗಳಲ್ಲಿ ಸೋಲು ಕಂಡಿದೆ.

ಹಿಮಾಚಲ ಪ್ರದೇಶದ ಮಂಡಿ ಲೋಕಸಭಾ ಕ್ಷೇತ್ರದಲ್ಲಿ ಮಾಜಿ (7ನೇ ಪುಟಕ್ಕೆ)

# 25 ಲಕ್ಷ ಜನರಿಂದ ಪುನೀತ್ ದರ್ಶನ

ಬೆಂಗಳೂರು, ನ. 2- ಹಠಾತ್ ನಿಧನ ಹೊಂದಿದ ಪವರ್ ಸ್ಟಾರ್, ಯುವನಟ ಪುನೀತ್ ರಾಜ್‌ಕುಮಾರ್ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದವರ ಸಂಖ್ಯೆ 25 ಲಕ್ಷ.

ಗೃಹ ಸಚಿವ ಆರಗ ಜ್ಞಾನೇಂದ್ರ ಈ ಅಂಕಿ-ಅಂಶಗಳನ್ನು ಸುದ್ದಿಗಾರರ ಮುಂದಿಟ್ಟಿದ್ದಲ್ಲದೆ, ದರ್ಶನ ಪಡೆದವರಲ್ಲಿ ಹೆಚ್ಚಿನ ಪಾಲು ಯುವಜನರು ಎಂದರು.

ಪಾರ್ಥಿವ ಶರೀರದ ದರ್ಶನಕ್ಕೆ ಮತ್ತಷ್ಟು ಅವಕಾಶ ನೀಡಿದ್ದರೆ, ಈ ಸಂಖ್ಯೆ ಮತ್ತಷ್ಟು ಏರುತ್ತಿತ್ತು, ಪುನೀತ್ ಅವರ ತಂದೆ ವರ ನಟ ಡಾ. ರಾಜ್‌ಕುಮಾರ್ ಅವರ ನಿಧನದ ಸಂದರ್ಭದಲ್ಲಿ ಇಷ್ಟೊಂದು ಮಂದಿಗೆ ದರ್ಶನ ಪಡೆಯಲು ಅವಕಾಶ ಆಗಿರಲಿಲ್ಲ.

# ಅಕ್ರಮ ಹಣ : ನ.6ರವರೆಗೆ ದೇಶಮುಖ್ ಇ.ಡಿ. ಕಸ್ಟಡಿಗೆ

ಮುಂಬೈ, ನ. 2 – ಬಹುಕೋಟಿ ಅಕ್ರಮ ಹಣ ಪ್ರಕರಣಕ್ಕೆ ಸಂಬಂಧಿಸಿದಂತೆ ಮಹಾರಾಷ್ಟ್ರದ ಮಾಜಿ ಗೃಹ ಸಚಿವ ಅನಿಲ್ ದೇಶಮುಖ್ ಅವರನ್ನು ಮುಂಬೈ ನ್ಯಾಯಾಲಯ ನವೆಂಬರ್ 6ರವರೆಗೆ ಜಾರಿ ನಿರ್ದೇಶನಾಲಯದ (ಇ.ಡಿ.) ವಶಕ್ಕೆ ವಹಿಸಿದೆ.

71 ವರ್ಷದ ದೇಶ್‌ಮುಖ್ ಅವರನ್ನು ಜಾರಿ ನಿರ್ದೇಶನಾಲಯ ಸೋಮವಾರ ತಡರಾತ್ರಿಯವರೆಗೆ ವಿಚಾರಣೆ ನಡೆಸಿದ ನಂತರ ಬಂಧಿಸಿತ್ತು. ನಂತರ ಅವರನ್ನು ಹೆಚ್ಚುವರಿ ಸೆಷನ್ಸ್ ನ್ಯಾಯಮೂರ್ತಿ ಪಿ.ಬಿ. ಜಾಧವ್ ಎದುರು ಹಾಜರು ಪಡಿಸಲಾಯಿತು.

ಜಾರಿ ನಿರ್ದೇಶನಾಲಯದ ಪರವಾಗಿ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಅನಿಲ್ ಸಿಂಗ್, ದೇಶಮುಖ್ ಅವರನ್ನು 14 ದಿನಗಳ ಕಾಲ ಕಸ್ಟಡಿಗೆ ವಹಿಸುವಂತೆ ಮನವಿ ಮಾಡಿಕೊಂಡಿದ್ದರು.

ದೇಶಮುಖ್ ತಮ್ಮ ಅಧಿಕಾರ ದುರ್ಬಳಕೆ ಮಾಡಿಕೊಂಡು ಭ್ರಷ್ಟಾಚಾರ ನಡೆಸಿದ್ದಾರೆ ಎಂದು ಸಿಬಿಐ ಕಳೆದ ಏಪ್ರಿಲ್ 21ರಂದು ಆರೋಪ ಪಟ್ಟಿ ದಾಖಲಿಸಿತ್ತು.

ನಂತರ ವಿಚಾರಣೆಗೆ ಮುಂದಾಗಿದ್ದ ಜಾರಿ ನಿರ್ದೇಶನಾಲಯ, ಅಕ್ರಮ ಹಣವನ್ನು ನಾಗಪುರದ ಶ್ರೀ ಸಾಯಿ ಶಿಕ್ಷ ಸಂಸ್ಥಾದಲ್ಲಿ ಮುಚ್ಚಿಡಲಾಗಿದೆ ಎಂದು ಆರೋಪಿಸಿತ್ತು. ಈ ಸಂಸ್ಥೆಯನ್ನು ದೇಶಮುಖ್ ಕುಟುಂಬ ನಿರ್ವಹಿಸುತ್ತದೆ.

# ಸಮಸ್ಯೆ ಮುಕ್ತ ಜೀವನಕ್ಕೆ ಹಿಂದೂ ಸಂಘಟನೆಯೇ ಪರಿಹಾರ



ವಿಜಯದಶಮಿ ಅಂಗವಾಗಿ ದಾವಣಗೆರೆ ವಿನೋಬನಗರದ ಗಣಪತಿ ದೇವಸ್ಥಾನದಿಂದ ನಗರದ ವಿವಿಧ ರಸ್ತೆಗಳಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದಿಂದ ಆಕರ್ಷಕ ಪಥ ಸಂಚಲನ ನಡೆಯಿತು.

> **ಆರ್.ಎಸ್.ಎಸ್. ಶಿವಮೊಗ್ಗ ವಿಭಾಗದ ಪ್ರಚಾರ ಪ್ರಮುಖ ಮಧುಕರ್ ಅಭಿಮತ**

ದಾವಣಗೆರೆ, ನ.2- ಸಮಸ್ಯೆ ಮುಕ್ತ ಜೀವನಕ್ಕೆ ಹಿಂದೂ ಸಂಘಟನೆಯೊಂದೇ ಪರಿಹಾರ. ಹಿಂದೂಗಳಲ್ಲಿ ಜಾಗೃತಿ ಮೂಡಿಸಲು ಹಾಗೂ ಆತ್ಮ ವಿಶ್ವಾಸ ತುಂಬಲು ರಾಷ್ಟ್ರೀಯ ಸ್ವಯಂ ಸೇವಕ ಸಂಘವೇ ಮಾರ್ಗ ಎಂದು ಆರ್.ಎಸ್.ಎಸ್.ನ ಶಿವಮೊಗ್ಗ ವಿಭಾಗದ ಪ್ರಚಾರ ಪ್ರಮುಖ ಮಧುಕರ್ ಹೇಳಿದರು.

ವಿಜಯದಶಮಿ ಅಂಗವಾಗಿ ನಗರದ ನಿಜಲಿಂಗಪ್ಪ ಬಡಾವಣೆಯಲ್ಲಿನ ಶ್ರೀ ಮಾತಾ ಅಮೃತಾನಂದಮಯಿ ಶಾಲೆ ಪಕ್ಕದಲ್ಲಿನ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಧಾರ್ಮಿಕ ಜಾಗೃತಿ ಕೊರತೆಯಿಂದಾಗಿ ಲವ್ ಜಿಹಾದ್, ಮತಾಂತರದಂತಹ ಕೆಲಸಗಳು ನಡೆಯುತ್ತಿವೆ. ಧರ್ಮ ಜಾಗರಣದ ಮೂಲಕ ಸಮಾಜದಲ್ಲಿ ಧಾರ್ಮಿಕ ಜಾಗೃತಿ ಮೂಡಿಸುವ ಕೆಲಸವನ್ನು ರಾಷ್ಟ್ರೀಯ ಸ್ವಯಂ ಸೇವಕ ಸಂಘ ಮಾಡುತ್ತಿದೆ ಎಂದು ಹೇಳಿದರು.

ರಾಷ್ಟ್ರೀಯ ಸ್ವಯಂ ಸೇವಕ ಸಂಘವನ್ನು ಕೇಶವ್ ಬಲಿರಾಂ ಹೆಡ್ಗೆವಾರ್ ಎಂಬುವವರು 1925ರಲ್ಲಿ ಸ್ಥಾಪಿಸಿದರು. ಆದರೆ ಸಂಘದ ಸ್ಥಾಪನೆಗೂ 9 ವರ್ಷ ಮೊದಲು ಸಮಾಜದ ಬಗ್ಗೆ ಅಧ್ಯಯನ ಮಾಡಿ, ಸಮಸ್ಯೆಗಳನ್ನು ಅರ್ಥೈಸಿಕೊಂಡ ನಂತರವೇ ಸ್ಥಾಪನೆ ಮಾಡಿದರು.

ಸಂಘವು ಈಗಲೇ ಭಗವಂತನ ವಿಶ್ವರೂಪದಂತೆ ಕಾರ್ಯ ನಿರ್ವಹಿಸುತ್ತಿದೆ. 40ಕ್ಕೂ ಹೆಚ್ಚು (7ನೇ ಪುಟಕ್ಕೆ)

# ಎರಡು ತಿಂಗಳಲ್ಲಿ 125 ಭಾರೀ ಮಳೆ ಘಟನೆಗಳು

ನವದೆಹಲಿ, ನ. 2 – ಕಳೆದ ಸೆಪ್ಟೆಂಬರ್ ಹಾಗೂ ಅಕ್ಟೋಬರ್‌ನಲ್ಲಿ ದೇಶದಲ್ಲಿ 125 ಭಾರೀ ಮಳೆ ಘಟನೆಗಳು ನಡೆದಿವೆ. ಮುಂಗಾರು ಮಳೆ ಮುಗಿಯುವ ಅವಧಿ ವಿಳಂಬವಾಗಿದ್ದೇ ಇದಕ್ಕೆ ಕಾರಣ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕಳೆದ ಐದು ವರ್ಷಗಳಲ್ಲೇ ಅತಿ ಹೆಚ್ಚಿನ ಮಳೆ ಘಟನೆಗಳು ಈ ಎರಡು ತಿಂಗಳುಗಳಲ್ಲಿ ನಡೆದಿವೆ. ಸೆಪ್ಟೆಂಬರ್‌ನಲ್ಲಿ 89 ಹಾಗೂ ಅಕ್ಟೋಬರ್‌ನಲ್ಲಿ 36 ತೀವ್ರ ಮಳೆಯ ಘಟನೆಗಳು ನಡೆದಿವೆ. ಎರಡು ತಿಂಗಳ ಅವಧಿಯಲ್ಲಿ ಒಂಭತ್ತು ಲಘು ವಾಯು ಭಾರ ಕುಸಿತ, ಎರಡು ಚಂಡಮಾರುತ, ಒಂದು ತೀವ್ರ ವಾಯುಭಾರ ಕುಸಿತ ಹಾಗೂ ಆರು ವಾಯುಭಾರ ಕುಸಿತಗಳು ಸಂಭವಿಸಿವೆ.

## ಶೂನ್ಯ ಪಾಸಿಟಿವಿಟಿ

ಬೆಂಗಳೂರು, ನ. 2- ಕೋವಿಡ್-19 ಸೋಂಕಿಗೆ ಬೆಂಗಳೂರು ನಗರದಲ್ಲಿ ಹೊಸದಾಗಿ ಒಳಗಾದವರ ಸಂಖ್ಯೆ ಶೂನ್ಯ. ಬಹುದಿನಗಳ ನಂತರ ನಗರದಲ್ಲಿ ಪಾಸಿಟಿವಿಟಿ ದರ ಶೂನ್ಯಕ್ಕಿಳಿದಿದೆ. ನಗರದಲ್ಲಿ ಸರಿ ಸುಮಾರು 1.50 ಕೋಟಿ ಜನಸಂಖ್ಯೆ (7ನೇ ಪುಟಕ್ಕೆ)

# ಹಳ್ಳಿಗಳಲ್ಲಿ ಜಲಜೀವನ ಮಿಷನ್ ಯೋಜನೆಗೆ ವಿರೋಧ

## ಗ್ರಾಮೀಣರ ಮನವೊಲಿಸುವಂತೆ ಅಧಿಕಾರಿಗಳಿಗೆ ಸಂಸದ ಜಿ.ಎಂ. ಸಿದ್ದೇಶ್ವರ ಸೂಚನೆ

ದಾವಣಗೆರೆ, ನ.2- ಗ್ರಾಮೀಣ ಭಾಗದಲ್ಲಿನ ಪ್ರತಿ ಮನೆಗೂ ಕುಡಿಯುವ ನೀರು ಸಂಪರ್ಕ ಕಲ್ಪಿಸುವ ಜಲಜೀವನ ಮಿಷನ್ ಯೋಜನೆಗೆ ವಿರೋಧ ವ್ಯಕ್ತಪಡಿಸುವ ಗ್ರಾಮಗಳಲ್ಲಿ ನೀರಿನ ಮಹತ್ವದ ಬಗ್ಗೆ ಅರಿವು ಮೂಡಿಸಿ, ಸ್ಥಳೀಯ ಜನಪ್ರತಿನಿಧಿಗಳ ಮೂಲಕ ಮನವೊಲಿಸುವಂತೆ ಸಂಸದ ಜಿ.ಎಂ. ಸಿದ್ದೇಶ್ವರ್ ಸೂಚಿಸಿದರು.

ನಗರದ ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ ಮಂಗಳವಾರ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿಯ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಅಮೂಲ್ಯವಾದ ನೀರನ್ನು ಅನಗತ್ಯವಾಗಿ ಪೋಲು ಮಾಡಬಾರದು ಹಾಗೂ ಪ್ರತಿಯೊಬ್ಬರ ಮನೆಗೂ ಕುಡಿಯುವ ನೀರು ಸಿಗಬೇಕೆಂಬ ದೃಷ್ಟಿಯಿಂದ ಜಲಜೀವನ್ ಯೋಜನೆಯಡಿ ನಲ್ಲಿ ಸಂಪರ್ಕ ಕಲ್ಪಿಸಿ ಮೀಟರ್ ಅಳವಡಿಸಲಾಗುತ್ತದೆ. ಈ ಬಗ್ಗೆ ಗ್ರಾಮಸ್ಥರಿಗೆ



ತಿಳಿ ಹೇಳಬೇಕು ಎಂದರು.

ಯೋಜನೆಗೆ ವಿರೋಧ ವ್ಯಕ್ತಪಡಿಸುವ ಗ್ರಾಮಗಳ ಪಟ್ಟಿ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿ, ದಿಶಾ ಸಮಿತಿ ಸದಸ್ಯರು, ಸ್ಥಳೀಯ ಶಾಸಕರುಗಳ ಸಹಾಯದಿಂದ ಗ್ರಾಮಸ್ಥರ ಮನವೊಲಿಸುವಂತೆಯೂ ಹಾಗು ತಾವೂ ಸಹ ಪರಿಶೀಲಿಸುವುದಾಗಿ ಹೇಳಿದರು.

ಇದಕ್ಕೂ ಮುನ್ನ ಜಿಲ್ಲಾ ಪಂಚಾಯ್ತಿ ಸಿಇಒ ಡಾ.ಮಹಾಂತೇಶ ದಾನಮ್ಮನವರ್ ಮಾತನಾಡಿ, ಅನೇಕ ಗ್ರಾಮಗಳಲ್ಲಿ ಯೋಜನೆಗೆ ವಿರೋಧ ವ್ಯಕ್ತವಾಗುತ್ತಿದೆ. ಮೀಟರ್ ಅಳವಡಿಸಿದರೆ ಹಣ ಕಟ್ಟಬೇಕಾಗುತ್ತದೆ ಎಂದು ಕೆಲವರ ವಿರೋಧ ಇದೆ. ನಲ್ಲಿ ಸಂಪರ್ಕ ಕಲ್ಪಿಸಲು ಈಗಿರುವ ಸಿಸಿ ರಸ್ತೆಯನ್ನು ಒಡೆಯಲು ಕೆಲ ಕಡೆ ವಿರೋಧವಿದೆ. ಮತ್ತೊಂದೆಡೆ ರಸ್ತೆ ಹಾಗೂ (7ನೇ ಪುಟಕ್ಕೆ)

> **ಸರ್ಕಾರದ ಯಾವುದೇ ವಸತಿ ಯೋಜನೆಗಳಡಿ ಮನೆ ಮಂಜೂರು ಮಾಡಲು ಯಾರೂ ಕೂಡ ಹಣ ನೀಡಬಾರದು. ಮನೆ ಮಂಜೂರಾತಿಗೆ ಹಣ ನೀಡುವಂತೆ ಯಾವುದೇ ಅಧಿಕಾರಿ ಅಥವಾ ಯಾವುದೇ ವ್ಯಕ್ತಿಗಳು ಹಣದ ಬೇಡಿಕೆ ಇಟ್ಟರೆ, ಜಿಲ್ಲಾಧಿಕಾರಿ, ಜಿ.ಪಂ. ಸಿಇಒ, ಶಾಸಕರು ಅಥವಾ ನನಗೆ ಮಾಹಿತಿ ನೀಡಿ. ಅಂತಹವರ ವಿರುದ್ಧ ಸೂಕ್ತ ಕ್ರಮ ಜರುಗಿಸಲಾಗುವುದು.**
> **- ಜಿ.ಎಂ. ಸಿದ್ದೇಶ್ವರ, ಸಂಸದ**

# ನೀರು ಸದ್ಬಳಕೆಯಾಗದಿದ್ದರೆ ಜಲಕ್ಷಾಮ ಎದುರಿಸಬೇಕಾದೀತು



> **ರಾಜ್ಯ ಕಬ್ಬು ಬೆಳೆಗಾರರ ಸಂಘದ ಸಂವಾದದಲ್ಲಿ ರಾಜೇಂದ್ರ ಪೋತೆದಾರ ಕಳವಳ**

ದಾವಣಗೆರೆ, ನ.2- ನೀರು ಸದ್ಬಳಕೆಯಾಗದಿದ್ದರೆ ಜಲಕ್ಷಾಮ ಎದುರಿಸಬೇಕಾದೀತು ಎಂದು ಧಾರವಾಡದ ವಾಲ್ಮೀ ಸಂಸ್ಥೆಯ ನಿರ್ದೇಶಕ ಡಾ. ರಾಜೇಂದ್ರ ಪೋತೆದಾರ ಕಳವಳ ವ್ಯಕ್ತಪಡಿಸಿದರು.

ಅವರು, ಇಂದು ನಗರದ ಎಪಿಎಂಸಿ ಸಭಾಂಗಣದಲ್ಲಿ ರಾಜ್ಯ ಕಬ್ಬು ಬೆಳೆಗಾರರ ಸಂಘದಿಂದ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಸಂವಾದ ಮತ್ತು ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ನೀರಿನ ಪ್ರಮಾಣ ಕಡಿಮೆಯಾದರೆ ಭೂಮಿ ಬರಡಾಗಲಿದೆ. ನೀರು ಹೆಚ್ಚಾದರೂ ಭೂಮಿ ಜೌಗು ಆಗಲಿದೆ. ಆದ್ದರಿಂದ ನೀರನ್ನು ಬೇಕಾದಷ್ಟು ಪ್ರಮಾಣದಲ್ಲಿ ಮಾತ್ರ ಬಳಕೆ ಮಾಡಿಕೊಳ್ಳಬೇಕು. ಅನಗತ್ಯವಾಗಿ ನೀರು ಪೋಲಾಗುವುದನ್ನು ತಡೆಯದಿದ್ದರೆ, ನೀರಿನ ಸದ್ಬಳಕೆಯಾಗದಿದ್ದರೆ 2030ರ ವೇಳೆಗೆ ಜಗತ್ತಿನಲ್ಲಿ ನೀರಿನ (7ನೇ ಪುಟಕ್ಕೆ)

# 'ಜಲಜೀವನ' ಯೋಜನೆಗೆ ವಿರೋಧ

**(5ನೇ ಪುಟದಿಂದ)** ಮನೆಗಳ ಮುಂದೆ ತೆಂಗಿನ ಮರಗಳಿರುವುದರಿಂದ ವಿರೋಧ ವ್ಯಕ್ತವಾಗುತ್ತಿದೆ ಎಂದರು.

ದಿಶಾ ಸಮಿತಿ ಸದಸ್ಯ ಅಣ್ಣೇಶ್ ಐರಣಿ ಮಾತನಾಡಿ, ರಸ್ತೆ ತುಂಡರಿಸಿ ಪೈಪ್ ಲೈನ್ ಅಳವಡಿಸುವ ಗುತ್ತಿಗೆದಾರರು ಸರಿಯಾಗಿ ಮುಚ್ಚುತ್ತಿಲ್ಲ ಎಂದು ಆರೋಪಿಸಿದರು. ತುಂಡರಿಸಿದ ರಸ್ತೆಯನ್ನು ಮೊದಲಿನಂತೆ ರಿಪೇರಿ ಮಾಡುವುದು ಗುತ್ತಿಗೆದಾರರ ಕರ್ತವ್ಯವಾಗಿದ್ದು, ಅಧಿಕಾರಿಗಳು ಗಮನ ಹರಿಸಬೇಕು ಎಂದು ಸಂಸದ ಸಿದ್ದೇಶ್ವರ ಸೂಚಿಸಿದರು.

**ಟಿವಿ ಸ್ಟೇಷನ್ ಕೆರೆ ಅಭಿವೃದ್ಧಿ ಪಡಿಸಿ:** ಕುಂದುವಾಡ ಕೆರೆ ಅಭಿವೃದ್ಧಿಪಡಿಸುತ್ತಿರುವಂತೆ ನಗರದ ಟಿವಿ ಸ್ಟೇಷನ್ ಕೆರೆಯನ್ನೂ ಅಭಿವೃದ್ಧಿ ಪಡಿಸುವಂತೆ ದಿಶಾ ಸಮಿತಿ ಸದಸ್ಯ ಜಿ.ಪಿ. ಮುದ್ದಣ್ಣ ಒತ್ತಾಯಿಸಿದರು. ಕೆರೆ ಆವರಣದಲ್ಲಿ ಯೋಗ ಮಂದಿರ ನಿರ್ಮಿಸುವಂತೆ, ಕೆರೆಯ ಸುತ್ತ ವಿದ್ಯುತ್ ದೀಪ ಅಳವಡಿಸುವಂತೆ ಹೇಳಿದರು.

ಪಾಲಿಕೆ ಮೇಯರ್ ಎಸ್.ಟಿ. ವೀರೇಶ್ ಹಾಗೂ ಆಯುಕ್ತ ವಿಶ್ವನಾಥ ಮುದಜ್ಜಿ, ಈಗಾಗಲೇ ಕೆರೆ ಅಭಿವೃದ್ಧಿಗೆ ದೂಡಾದಿಂದ ಪ್ರಸ್ತಾವನೆ ಸಲ್ಲಿಸಲಾಗಿದೆ. ಯೋಗ ಮಂದಿರಕ್ಕೆ ಸೂಕ್ತ ಜಾಗದ ಕೊರತೆ ಇದೆ ಎಂದರು.

**ತ್ಯಾಜ್ಯ ಸದ್ವಿನಿಯೋಗಕ್ಕೆ ಸಲಹೆ:** ನಗರ ವೇಗವಾಗಿ ಬೆಳೆಯುತ್ತಿದ್ದು, ತ್ಯಾಜ್ಯವೂ ಹೆಚ್ಚಾಗುತ್ತಿದೆ. ಬೇರೆಯವರಿಗೆ ಉಚಿತವಾಗಿ ತ್ಯಾಜ್ಯ ಕಳುಹಿಸುವ ಬದಲು ಹಸಿ ಹಾಗೂ ಒಣ ತ್ಯಾಜ್ಯದಿಂದ ಗೊಬ್ಬರ, ಇಂಧನ ಉತ್ಪತ್ತಿ ಮಾಡುವ ಬಗ್ಗೆ ಚಿಂತಿಸಿ, ಪ್ರಸ್ತಾವನೆ ಸಲ್ಲಿಸುವಂತೆ ಪಾಲಿಕೆ ಆಯುಕ್ತರಿಗೆ ಸಂಸದರು ಸೂಚಿಸಿದರು. ಕಳೆದ ಸಭೆಯಲ್ಲಿ ಹಂದಿ ನಿರ್ಮೂಲನೆಗೆ 15 ದಿನಗಳಲ್ಲಿ ಕ್ರಮ ಕೈಗೊಳ್ಳುವುದಾಗಿ ಹೇಳಿದ್ದು, 6 ತಿಂಗಳಾ ದರೂ ಏಕೆ ಕ್ರಮಕೈಗೊಂಡಿಲ್ಲ ಎಂದು ಸಂಸದರು ಆಯುಕ್ತರನ್ನು ಪ್ರಶ್ನಿಸಿದರು.

ಹೆಬ್ಬಾಳ್ ಗ್ರಾಮದ ಬಳಿ ಹಂದಿಗಳನ್ನು ಸ್ಥಳಾಂತರಿಸಲು ಯೋಜಿಸಿದ ಜಮೀನು ಆ.11 ರಂದು ಪಾಲಿಕೆಗೆ ಹಸ್ತಾಂತರಗೊಂಡಿದ್ದು, ಕಾಂಪೌಂಡ್ ನಿರ್ಮಾಣಕ್ಕೆ ಅಂದಾಜು ಪಟ್ಟಿ ತಯಾರಿಸಿ, ಟೆಂಡರ್ ಕರೆದು ಕಾಮಗಾರಿ ಆರಂಭವಾಗಿದೆ. ಇನ್ನು 3 ತಿಂಗಳೊಳಗೆ ಪೂರ್ಣವಾಗಲಿದೆ ಎಂದು ಹೇಳಿದರು. ಕೆಲವರಿಂದ ವಿರೋಧ ವ್ಯಕ್ತವಾದದ್ದರಿಂದ ವಿಳಂಬವಾಯಿತು ಎಂದು ಸಮಜಾಯಿಷಿ ನೀಡಿದರು.

**ಶಾಲಾ ಕಾಂಪೌಂಡ್ ಶೀಘ್ರ ನಿರ್ಮಿಸಿ:** ಜಿಲ್ಲೆಯಲ್ಲಿ ಸರ್ಕಾರಿ ಶಾಲೆಗಳಿಗೆ ಕಾಂಪೌಂಡ್‌ಗಳನ್ನು ಶೀಘ್ರವಾಗಿ ನಿರ್ಮಿಸಲು ಕ್ರಮ ಕೈಗೊಳ್ಳುವಂತೆ ಸಂಸದ ಸಿದ್ದೇಶ್ವರ ಅಧಿಕಾರಿಗಳಿಗೆ ಸೂಚಿಸಿದರು. ಇದಕ್ಕೂ ಮುನ್ನ ಮಾತನಾಡಿದ ಡಿಡಿಪಿಐ ಸಿ.ಆರ್. ಪರಮೇಶ್ವರಪ್ಪ, ಜಿಲ್ಲೆಯಲ್ಲಿ 193 ಶಾಲೆಗಳ ಕಾಂಪೌಂಡ್ ನಿರ್ಮಾಣಕ್ಕೆ ಕ್ರಿಯಾಯೋಜನೆ ರೂಪಿಸಲಾಗಿದ್ದು, 16 ಕಾಮಗಾರಿಗಳನ್ನು ಆರಂಭಿಸಲಾಗಿದೆ ಎಂದು ಹೇಳಿದರು.

**ಆಶ್ರಯ ಮನೆ-ಒತ್ತಡಕ್ಕೆ ಮಣಿಯದಿರಿ:** ನಾನೇ ಆಗಲಿ, ಶಾಸಕರು ಅಥವಾ ಅಧಿಕಾರಿಗಳೇ ಆಗಲಿ ಒತ್ತಡ ಅಥವಾ ಶಿಫಾರಸ್ಸು ಮಾಡಿದರೆ ಮನೆ ಇದ್ದವರಿಗೆ ಆಶ್ರಯ ಮನೆಗಳನ್ನು ನೀಡಬಾರದು. ಈ ಬಗ್ಗೆ ಗ್ರಾ.ಪಂ. ಅಧ್ಯಕ್ಷರು, ಕಾರ್ಯದರ್ಶಿಗಳು, ಪಿಡಿಒಗಳು ಗಮನ ಹರಿಸಿ, ಅರ್ಹ ಫಲಾನುಭವಿಗಳಿಗೆ ಮಾತ್ರ ಪ್ರಧಾನ ಮಂತ್ರಿ ಆವಾಸ್ ಯೋಜನೆಯ ಲಾಭ ದೊರೆಯುವಂತೆ ಮಾಡಬೇಕು ಎಂದು ಹೇಳಿದರು.

ಅರ್ಹರಿಗೆ ಮನೆಗಳು ಸಿಗಲೆಂಬ ಉದ್ದೇಶದಿಂದ ಜನಪ್ರತಿನಿಧಿಗಳ ಮನ ವೊಲಿಸುವಂತೆಯೂ, ಒತ್ತಡಗಳಿಗೆ ಮಣಿಯಬಾರದು ಎಂದು ಜಿಲ್ಲಾಧಿಕಾರಿಗಳೂ ಸಹ ಅಧಿಕಾರಿಗಳಿಗೆ ಮನವಿ ಮಾಡಿದರು.

ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ ಚಿಂತಾಲ್ ಮಾತನಾಡಿ, ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ ಕಳೆದ ಬಾರಿ 17127 ರೈತರು ನೋಂದಣಿ ಮಾಡಿಕೊಂಡಿದ್ದರು. ಈ ಬಾರಿ ಹೆಚ್ಚಿನ ಪ್ರಚಾರ ಮಾಡಿದ್ದರ ಹಿನ್ನೆಲೆಯಲ್ಲಿ 21514 ರೈತರು ನೋಂದಣಿ ಮಾಡಿಕೊಂಡಿದ್ದಾರೆ ಎಂದು ಹೇಳಿದರು.

ದಿಶಾ ಸಮಿತಿ ಸದಸ್ಯ ಜೆ.ಪಿ. ಮುಪ್ಪಣ್ಣ ಮಾತನಾಡಿ, ಜಿಲ್ಲೆಯಲ್ಲಿ ಕಳೆದ ವರ್ಷ 23685 ಗರ್ಭಿಣಿಯರ ನೋಂದಣಿಯಾಗಿದ್ದು, ಈ ಪೈಕಿ 2600 ಗರ್ಭಪಾತ ಸಂಭವಿಸಿದ್ದು, ಹೆಣ್ಣು ಮಕ್ಕಳ ಲಿಂಗಾನುಪಾತ ವಿಷಯಕ್ಕೆ ಸಂಬಂಧಿಸಿದಂತೆ ಇದನ್ನು ಗಂಭೀರವಾಗಿ ಪರಿಗಣಿಸಬೇಕು. ಹೆಚ್ಚು ಗರ್ಭಪಾತ ನಡೆಯುತ್ತಿರುವ ಆಸ್ಪತ್ರೆ, ನರ್ಸಿಂಗ್ ಹೋಂಗಳನ್ನು ಪರಿಶೀಲನೆಗೆ ಒಳಪಡಿಸಬೇಕು ಎಂದು ಒತ್ತಾಯಿಸಿದರು.

ಉಜ್ವಲ ಯೋಜನೆಯಡಿ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲು ಹರಿಹರದ ಲಕ್ಷ್ಮಿ ಗ್ಯಾಸ್ ಏಜೆನ್ಸಿ ಅವರು ಫಲಾನುಭವಿಗಳಿಂದ ಹಣ ಕೇಳುತ್ತಿರುವ ಬಗ್ಗೆ ಬಹಳಷ್ಟು ದೂರುಗಳು ಬಂದ ಹಿನ್ನೆಲೆಯಲ್ಲಿ, ಈ ಏಜೆನ್ಸಿಯ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಂಡು, ಲೈಸೆನ್ಸ್ ರದ್ದುಪಡಿಸುವಂತೆ ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ಶಿಫಾರಸ್ಸು ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು ಸಭೆಗೆ ಮಾಹಿತಿ ನೀಡಿದರು.

ಜಗಳೂರು ಶಾಸಕ ರಾಮಚಂದ್ರ ಮಾತನಾಡಿ, ಎಲ್ಲ ತಾಂಡಾ, ಹಾಡಿಗಳಿಗೆ ನ್ಯಾಯಬೆಲೆ ಅಂಗಡಿ ಮಂಜೂರು ಮಾಡುವಂತೆ ಈಗಾಗಲೇ ಸರ್ಕಾರ ಸೂಚನೆ ನೀಡಿದೆ, ಆದರೆ ಜಿಲ್ಲೆಯಲ್ಲಿ ಈ ಕಾರ್ಯ ಆಗಿಲ್ಲ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಆಹಾರ ಇಲಾಖೆ ಜಂಟಿನಿರ್ದೇಶಕ ಮಂಟೆ ಸ್ವಾಮಿ, ಕನಿಷ್ಟ 100 ಕಾರ್ಡ್ ಇದ್ದರೂ, ನ್ಯಾಯಬೆಲೆ ಅಂಗಡಿ ನೀಡುವಂತೆ ಇಲಾಖೆ ಸೂಚನೆ ನೀಡಿದ್ದು, ಈಗಾಗಲೇ ಜಿಲ್ಲೆಯಲ್ಲಿ ಸರ್ವೆ ಮಾಡಿಸ ಲಾಗುತ್ತಿದ್ದು, ಶೀಘ್ರ ಯೋಜನೆ ಅನುಷ್ಠಾನಗೊಳಿಸಲಾ ಗುವುದು ಎಂದರು. ಸಂಸದರು ಮಾತನಾಡಿ ರಾಜ್ಯದಲ್ಲಿ ಬರುವ ಜ. 26 ರಿಂದ ಮನೆ ಮನೆಗೆ ಪಡಿತರ ನೀಡುವ ಯೋಜನೆಯನ್ನು ರಾಜ್ಯ ಸರ್ಕಾರ ಜಾರಿಗೊಳಿಸುತ್ತಿದ್ದು, ಇದಕ್ಕೆ ಬೇಕಾದ ಎಲ್ಲ ಸಿದ್ಧತೆ ಮಾಡಿಕೊಳ್ಳುವಂತೆ ಸೂಚನೆ ನೀಡಿದರು.

ಸಭೆಯಲ್ಲಿ ಮಾಯಕೊಂಡ ಶಾಸಕ ಪ್ರೊ.ಲಿಂಗಣ್ಣ, ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ, ಸಿಇಒ ಮಹಾಂತೇಶ ದಾನಮ್ಮನವರ್, ದಿಶಾ ಸಮಿತಿ ಸದಸ್ಯರಾದ ಜಿ.ಎ. ಮುಪ್ಪಣ್ಣ, ಹೆಚ್.ಕೆ. ಬಸವರಾಜು, ಎನ್.ಟಿ. ತಿಪ್ಪೇಸ್ವಾಮಿ, ವೆಂಕಟಗಿರಿನಾಯ್ಕ ಸೇರಿದಂತೆ ಅಧಿಕಾರಿಗಳು ಉಪಸ್ಥಿತರಿದ್ದರು.

# 'ಕುರ್ಕಿ' ಅಮೃತ ಗ್ರಾಮ ಯೋಜನೆಗೆ ಸೇರಿಸಲು ಕ್ರಮ

## ಸಚಿವ ಈಶ್ವರಪ್ಪ



ದಾವಣಗೆರೆ, ನ.2- ಅಮೃತ ಗ್ರಾಮ ಯೋಜನೆಗೆ ಸೇರ್ಪಡೆಯಾಗದಿರುವ ಕುರ್ಕಿ ಗ್ರಾಮವನ್ನು ಈ ಯೋಜನೆಯಡಿ ತರಲು ಕ್ರಮ ಕೈಗೊಳ್ಳಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ಹೇಳಿದರು

ಮಾಯಕೊಂಡ ವಿಧಾನಸಭಾ ವ್ಯಾಪ್ತಿಯ ಹಿರೇತೊಗಲೇರಿ ಗ್ರಾಮದಲ್ಲಿ ಸ್ವಚ್ಛ ಸಂಕೀರ್ಣ ಹಾಗೂ ಕುರ್ಕಿ ಗ್ರಾಮದಲ್ಲಿ ಸಾರ್ವಜನಿಕ ಗ್ರಂಥಾಲಯ ಕಟ್ಟಡದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಗ್ರಾಮದ ಮಹಿಳೆ ಯರು ಸ್ವ ಸಹಾಯ ಸಂಘಗಳಲ್ಲಿ ಸಕ್ರಿಯವಾ ಗಿದ್ದು ಪ್ರತಿ ಮನೆಗಳಲ್ಲಿ ಶೌಚಾಲಯ ನಿರ್ಮಿಸುವ ಹಾಗೂ ಬಳಸುವ ಮೂಲಕ ಸ್ವಚ್ಛತೆಗೆ ಹಾಗೂ ನೈರ್ಮಲ್ಯಕ್ಕೆ ಹೆಚ್ಚು ಗಮನ ಹರಿಸಬೇಕೆಂದರು. ಈಗಾಗಲೇ ನರೇಂದ್ರ ಮೋದಿ ನೇತೃತ್ವದ ನಮ್ಮ ಸರ್ಕಾರ ಜಲ ಜೀವನ್ ಮಿಷನ್ ಅಡಿ ಪ್ರತಿ ಮನೆಗೆ ನಳದ ಮೂಲಕ ನೀರು ಕೊಡಲು ಕಾರ್ಯೋನ್ಮುಖ ವಾಗಿದ್ದು 2024 ರ ವೇಳೆಗೆ ಪ್ರತಿ ಮನೆಯೂ ನಲ್ಲಿ ನೀರಿನ ಸಂಪರ್ಕ ಹೊಂದಲಿವೆ. ಅದರಂತೆ ಗ್ರಾಮ ಬಹುಗ್ರಾಮ ಕುಡಿಯುವ ನೀರು ಯೋಜನೆಗೆ ಆಯ್ಕೆಯಾಗಿದೆ ಎಂದರು

ಸಂಸದ ಜಿ.ಎಂ. ಸಿದ್ದೇಶ್ವರ ಮಾತನಾಡಿ, ಜಿಲ್ಲೆಯಲ್ಲಿ 356 ಗ್ರಾಮಗಳಿಗೆ ಜಲಜೀವನ್ ಮಿಷನ್‌ನಡಿ ನೀರು ಪೂರೈಕೆ ಆಗುತ್ತಿದ್ದು ಉಳಿದ ಗ್ರಾಮಗಳಿಗೂ ಕುಡಿಯುವ ನೀರು ಒದಗಿಸಲಾಗುವುದು. ಸ್ವಚ್ಛ ಸಂಕೀರ್ಣ ಘಟಕವನ್ನು ಸರ್ಕಾರದ ಲೆಕ್ಕಕ್ಕಿಂತ ದೊಡ್ಡದಾಗಿ ನಿರ್ಮಿಸಿದ್ದು ಕೆಲಸದ ಬಗೆಗಿನ ನಿಮ್ಮ ಕಾಳಜಿಯನ್ನು ತೋರಿಸುತ್ತದೆ ಎಂದರು.

ಒಣತ್ಯಾಜ್ಯ ಘಟಕದೊಂದಿಗೆ ಹಸಿತ್ಯಾಜ್ಯ ಘಟಕವನ್ನು ಮಾಡಿಕೊಳ್ಳುವುದರಿಂದ ರೈತರಿಗೆ ಒಳ್ಳೆಯ ಗೊಬ್ಬರ ದೊರೆಯಲಿದೆ, ಇದರೊಂದಿಗೆ ಮಹಿಳಾ ಸ್ವ ಸಹಾಯ ಸಂಘಗಳು ಸದೃಢವಾಗುವುದರೊಂದಿಗೆ ಗ್ರಾ.ಪಂ ಗೂ ಆದಾಯ ಬರಲಿದೆ ಎಂದರು.

ಶಾಸಕ ಪ್ರೊ.ಲಿಂಗಣ್ಣ ಮಾತನಾಡಿ, ಈ ಗ್ರಾಮಕ್ಕೆ ಪದವಿ ಪೂರ್ವ ಕಾಲೇಜು ಮಂಜೂರು ಮಾಡಿಸಲು ಪ್ರಯತ್ನಿಸಲಾಗುವುದೆಂದರು. ಇದೇ ಸಂದರ್ಭದಲ್ಲಿ ಮನೆ ಮನೆಗೆ ಡಸ್ಟ್ ಬಿನ್ ಗಳನ್ನು ವಿತರಿಸಲಾಯಿತು. ಜಿ.ಪಂ.ಸಿಇಓ ವಿಜಯ ಮಹಾಂತೇಶ ದಾನಮ್ಮನವರ್ ಜಿ.ಪಂ.ಉಪ ಕಾರ್ಯದರ್ಶಿ ಆನಂದ್, ಗ್ರಾಮದ ಮುಖಂಡರು ಉಪಸ್ಥಿತರಿದ್ದರು.

# ಕೀಳರಿಮೆ ಬದಿಗಿಟ್ಟು ಶ್ರಮ ವಹಿಸಿ ಸಾಧನೆ ಮಾಡಿ

## ವಿದ್ಯಾರ್ಥಿಗಳಿಗೆ ಎಲ್ಐಸಿ ಅಭಿವೃದ್ಧಿ ಅಧಿಕಾರಿ ಶ್ರೀಕಾಂತ್ ಭಟ್ ಕಿವಿಮಾತು



ದಾವಣಗೆರೆ, ನ.2- ವಿದ್ಯಾರ್ಥಿಗಳು ಕೀಳರಿಮೆ ಬದಿಗಿಟ್ಟು ಶ್ರದ್ಧೆ, ಆಸಕ್ತಿ, ಶ್ರಮವಹಿಸಿ ಸಾಧನೆ ಮಾಡಬೇಕು ಎಂದು ಭಾರತೀಯ ಜೀವ ವಿಮಾ ನಿಗಮದ ಅಭಿವೃದ್ಧಿ ಅಧಿಕಾರಿ ಶ್ರೀಕಾಂತ್ ಭಟ್ ಕಿವಿ ಮಾತು ಹೇಳಿದರು.

ಶ್ರೀ ತರಳಬಾಳು ಜಗದ್ಗುರು ಸಂಯುಕ್ತ ಪದವಿ ಪೂರ್ವ ಕಾಲೇಜು ಹಾಗೂ ಅನುಭವ ಮಂಟಪ ಸ್ವತಂತ್ರ ಪದವಿ ಪೂರ್ವ ಕಾಲೇಜು ಸಂಯುಕ್ತಾಶ್ರಯದಲ್ಲಿ ನಗರದ ಡಾ. ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಸಮುದಾಯ ಭವನದಲ್ಲಿ ಮಂಗಳವಾರ 2021-22ನೇ ಸಾಲಿನ ಪ್ರತಿಭಾ ಪ್ರದರ್ಶನ ಹಾಗೂ ಬಹುಮಾನ ವಿತರಣಾ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಸಾಧನೆ ಸಾಧಕನ ಸ್ವತ್ತೇ ಹೊರತು, ಸೋಮಾರಿಗಳ ಸ್ವತ್ತಲ್ಲ. ಸಾಧನೆಗಿರುವ ಎಲ್ಲಾ ಅಡೆ - ತಡೆಗಳನ್ನು ತಡೆದು ನಾವು ಸಾಧಿಸಬೇಕು. ಭವಿಷ್ಯದ ಬಗ್ಗೆ ಕಂಡ ಕನಸು ನನಸು ಮಾಡಲು ಅಧ್ಯಾಪಕರ ಮಾರ್ಗದರ್ಶನ ಪಡೆದು ಮುನ್ನುಗ್ಗಬೇಕು ಎಂದು ವಿದ್ಯಾರ್ಥಿಗಳನ್ನು ಹುರಿದುಂಬಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀ ತರಳಬಾಳು ಜಗದ್ಗುರು ಸಂಯುಕ್ತ ಪದವಿಪೂರ್ವ ಕಾಲೇಜು ಪ್ರಾಚಾರ್ಯ ಡಾ.ಹೆಚ್.ಎನ್. ಪ್ರದೀಪ್ ಮಾತನಾಡುತ್ತಾ, ಎಲ್ಲಾ ಮಕ್ಕಳಲ್ಲೂ ತಮ್ಮದೇ ಆದ ಪ್ರತಿಭೆ ಇರುತ್ತದೆ. ಅದನ್ನು ಆತ್ಮ ವಿಶ್ವಾಸದಿಂದ ಹೊರ ಹೊಮ್ಮಿಸಬೇಕು ಎಂದು ಹೇಳಿದರು.

ಅನುಭವಮಂಟಪ ಸ್ವತಂತ್ರ ಪದವಿ ಪೂರ್ವ ಕಾಲೇಜು ಪ್ರಾಚಾರ್ಯ ಶ್ರೀಕುಮಾರ ಹಿಂಡಸಗಟ್ಟಿ, ಉಪನ್ಯಾಸಕ ಪುನ್ನಯ್ಯ ಚೌಧರಿ ವೇದಿಕೆ ಮೇಲೆ ಉಪಸ್ಥಿತರಿದ್ದರು.

ಇತ್ತೀಚೆಗೆ ನಿಧನರಾದ ಕನ್ನಡ ಚಿತ್ರರಂಗದ ಖ್ಯಾತ ನಟ ಪುನೀತ್ ರಾಜ್‌ಕುಮಾರ್ ಅವರಿಗೆ ಸಂತಾಪ ಸಲ್ಲಿಸಲಾಯಿತು. ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನೆರವೇರಿದವು. ವಿದ್ಯಾರ್ಥಿಗಳಾದ ಆಶ್ರಿತ ಎಸ್. ಸ್ವಾಗತಿಸಿದರು. ಪ್ರೇರಣಾ ಎಂ.ವಿ. ಮತ್ತು ಖುಷಿ ತರಗತಿ ಪ್ರತಿನಿಧಿಗಳನ್ನು ಪರಿಚಯಿಸಿದರು. ತನ್ಮಯಿ ಮತ್ತು ಭಾವನ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ವೃಂದಾ ಎನ್.ಸಿ ನಿರೂಪಿಸಿದರು. ಭೂಮಿಕಾ ವಿ.ಓ ವಂದಿಸಿದರು.

# ಹಾನಗಲ್ ಕೈ, ಸಿಂಧಗಿ ಕಮಲ

**(5ನೇ ಪುಟದಿಂದ)** ಉಪಚುನಾವಣೆಯಲ್ಲಿ ಬಿಜೆಪಿ ಭರ್ಜರಿ ಜಯ ಸಾಧಿಸಿದರೆ ಜೆಡಿಎಸ್ ಮೂರನೇ ಸ್ಥಾನಕ್ಕೆ ತಳ್ಳಲ್ಪಟ್ಟಿದೆ.

ಮನಗೂಳಿ ಅವರ ಹಿರಿಯ ಪುತ್ರ ಅಶೋಕ್ ಮನಗೂಳಿ ಅವರನ್ನು ಜೆಡಿಎಸ್‌ನಿಂದ ಕಾಂಗ್ರೆಸ್‌ಗೆ ಕರೆತಂದಿದ್ದ ಆ ಪಕ್ಷದ ನಾಯಕರು ಚುನಾವಣಾ ಕಣಕ್ಕೆ ಇಳಿಸಿದ್ದರು. ಆದರೂ ಕಾಂಗ್ರೆಸ್ ಆ ಕ್ಷೇತ್ರದಲ್ಲಿ ಗೆಲುವು ಸಾಧಿಸಲು ಸಾಧ್ಯವಾಗಲಿಲ್ಲ, ಬಿಜೆಪಿ ಅಭ್ಯರ್ಥಿ ವಿರುದ್ಧ 31,185 ಮತಗಳ ಅಂತರದಿಂದ ಭಾರೀ ಸೋಲು ಕಂಡಿತು.

ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿ ಆದ ನಂತರ ರಾಜ್ಯ ವಿಧಾನಸಭೆಗೆ ನಡೆದ ಮೊದಲ ಉಪಚುನಾವಣೆ ಇದಾಗಿತ್ತು.

ಎಲ್ಲದಕ್ಕೂ ಮಿಗಿಲಾಗಿ ಬಿ.ಎಸ್. ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿದ ನಂತರ ನಡೆದ ಉಪಚುನಾವಣೆಯೂ ಇದಾಗಿದೆ.

ಮತದಾರರು ಬಿಜೆಪಿಯನ್ನು ಯಾವ ರೀತಿ ಕೈಹಿಡಿಯುತ್ತಾರೆ ಎಂಬ ಆತಂಕ ಆ ಪಕ್ಷದ ನಾಯಕರಲ್ಲಿತ್ತು, ಅಷ್ಟೇ ಅಲ್ಲದೆ, ಬೊಮ್ಮಾಯಿ ಅವರಿಗೆ ಫಲಿತಾಂಶ ಪ್ರತಿಷ್ಠೆಯಾಗಿತ್ತು. ಬಿಜೆಪಿ ತನ್ನ ಕ್ಷೇತ್ರವನ್ನು ಕಳೆದುಕೊಂಡು ತನ್ನದಲ್ಲದ ಕ್ಷೇತ್ರದಲ್ಲಿ ಗೆಲುವು ಸಾಧಿಸಿದರೆ, ಕಾಂಗ್ರೆಸ್ ತನ್ನದಲ್ಲದ ಎರಡೂ ಕ್ಷೇತ್ರಗಳಲ್ಲಿ ಸ್ಪರ್ಧಿಸಿ ಹಾನಗಲ್ ಅನ್ನು ತನ್ನದಾಗಿಸಿಕೊಂಡಿತು.

ಇನ್ನು ಜೆಡಿಎಸ್ ತನ್ನ ಹಿಡಿತದಲ್ಲಿದ್ದ ಸಿಂಧಗಿಯನ್ನು ಬಿಜೆಪಿ ತೆಕ್ಕೆಗೆ ಬಿಟ್ಟು ಹೀನಾಯ ಸೋಲು ಕಂಡಿತು. ಕಳೆದ ವಿಧಾನಸಭಾ ಚುನಾವಣೆ ನಂತರ ನಡೆದ ಉಪಚುನಾವಣೆಯಲ್ಲಿ ಜೆಡಿಎಸ್ ಪ್ರತಿನಿಧಿಗಳಿದ್ದ ಐದು ಕ್ಷೇತ್ರಗಳಿಗೆ ಕಾರಣಾಂತರಗಳಿಂದ ನಡೆದ ಉಪಚುನಾವಣೆಯಲ್ಲಿ ಆ ಪಕ್ಷ ಒಂದನ್ನೂ ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ.

# ಉಪ ಚುನಾವಣೆಗಳಲ್ಲಿ ಮಿಶ್ರಫಲ

**(5ನೇ ಪುಟದಿಂದ)** ಮುಖ್ಯಮಂತ್ರಿ ವೀರಭದ್ರ ಸಿಂಗ್ ಅವರ ಪತ್ನಿ ಪ್ರತಿಭಾ ಸಿಂಗ್ ಗೆಲುವು ಸಾಧಿಸಿದ್ದಾರೆ. ದಾದ್ರಾ ಮತ್ತು ನಗರ್ ಹವೇಲಿ ಲೋಕಸಭಾ ಕ್ಷೇತ್ರದಲ್ಲಿ ಶಿವಸೇನೆಯ ಕಾಲಾಬೆನ್ ಡೆಲ್ಕರ್ ಅವರು ಗೆಲುವು ದಾಖಲಿಸಿದ್ದಾರೆ. ಮಧ್ಯ ಪ್ರದೇಶದ ಖಾಂಡ್ವಾ ಲೋಕಸಭಾ ಕ್ಷೇತ್ರವನ್ನು ಬಿಜೆಪಿ ಉಳಿಸಿಕೊಂಡಿದೆ. ಜೋಬಟ್ ಹಾಗೂ ಪೃಥ್ವಿಪುರ ವಿಧಾನಸಭಾ ಕ್ಷೇತ್ರಗಳಲ್ಲಿ ಗೆಲುವು ಕಂಡಿದೆಯಾದರೂ, ರಾಗಾಂವ್ ಕ್ಷೇತ್ರದಲ್ಲಿ ಸೋಲುಂಡಿದೆ.

ಅಸ್ಸಾಂನ ಎಲ್ಲಾ ಐದು ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿ ಹಾಗೂ ಮಿತ್ರಪಕ್ಷಗಳು ಗೆಲುವು ದಾಖಲಿಸಿವೆ.

ತೆಲಂಗಾಣದಲ್ಲಿ ಮಾಜಿ ಸಚಿವ ಈಟಲ ರಾಜೇಂದರ್ ಅವರು ಬಿಜೆಪಿಯಿಂದ ಗೆಲುವು ಸಾಧಿಸಿದ್ದಾರೆ. ಬಿಹಾರದಲ್ಲಿ ಬಿಜೆಪಿ ಮಿತ್ರಪಕ್ಷವಾದ ಜೆಡಿ (ಯು) ಎರಡು ಸ್ಥಾನಗಳಲ್ಲಿ ಗೆಲುವು ಸಾಧಿಸಿದೆ

ರಾಜಸ್ಥಾನದಲ್ಲಿ ಕಾಂಗ್ರೆಸ್ ಎರಡು ಸ್ಥಾನಗಳಲ್ಲಿ ಗೆಲುವು ಸಾಧಿಸಿದೆ.

ಹರಿಯಾಣದಲ್ಲಿ ಐ.ಎನ್.ಎಲ್.ಡಿ. ನಾಯಕ ಅಭಯ್ ಸಿಂಗ್ ಚೌತಾಲಾ ಗೆಲುವು ಸಾಧಿಸಿದ್ದಾರೆ.

ಕರ್ನಾಟಕದಲ್ಲಿ ಸಿಂಧಗಿ ಕ್ಷೇತ್ರವನ್ನು ಜೆಡಿಎಸ್‌ನಿಂದ ಬಿಜೆಪಿ ಕಸಿದಿದೆ. ಆದರೆ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನೆರೆಯ ಕ್ಷೇತ್ರವಾದ ಹಾನಗಲ್‌ನಲ್ಲಿ ಬಿಜೆಪಿ ಸೋಲು ಕಂಡಿದೆ.

ಹಿಮಾಚಲ ಪ್ರದೇಶದಲ್ಲಿ ಬಿಜೆಪಿಗೆ ತೀವ್ರ ಹಿನ್ನಡೆಯಾಗಿದೆ. ಮಂಡಿ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಗೆಲ್ಲುವ ಜೊತೆಗೆ, ಮೂರು ವಿಧಾನಸಭಾ ಕ್ಷೇತ್ರಗಳಲ್ಲೂ ಗೆಲುವು ಸಾಧಿಸಿದೆ. ಮುಂದಿನ ವರ್ಷ ಡಿಸೆಂಬರ್‌ನಲ್ಲಿ ರಾಜ್ಯದಲ್ಲಿ ವಿಧಾನಸಭಾ ಚುನಾವಣೆ ನಡೆಯಲಿದೆ.

ಉಪ ಚುನಾವಣೆಗಳ ಫಲಿತಾಂಶದ ಹಿನ್ನೆಲೆಯಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರನ್ನು ತರಾಟೆಗೆ ತೆಗೆದುಕೊಂಡಿರುವ ಕಾಂಗ್ರೆಸ್, ದುರಹಂಕಾರವನ್ನು ಬಿಟ್ಟು ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯಬೇಕು ಹಾಗೂ ಪೆಟ್ರೋಲ್ - ಡೀಸೆಲ್ ಲೂಟಿ ನಿಲ್ಲಿಸಬೇಕು ಎಂದು ಒತ್ತಾಯಿಸಿದೆ.

# ಶೂನ್ಯ ಪಾಸಿಟಿವಿಟಿ

**(5ನೇ ಪುಟದಿಂದ)** ಇದೆ. ನಗರದ ಹೊರವಲಯ ಮತ್ತು ರಾಜ್ಯದ ಇತರೆಡೆಯಿಂದ ಕೋವಿಡ್-19 ಸೋಂಕಿಗೆ ಒಳಪಟ್ಟವರು, ಇಲ್ಲಿನ ಸರ್ಕಾರಿ ಮತ್ತು ಪ್ರತಿಷ್ಠಿತ ಆಸ್ಪತ್ರೆಗಳಿಗೆ ದಾಖಲಾಗುತ್ತಿದ್ದವರ ಸಂಖ್ಯೆಯಲ್ಲೂ ಇಳಿಕೆಯಾಗಿದೆ. ನಿನ್ನೆ ಈ ಸಂಖ್ಯೆ 87 ಇತ್ತು, ಕೋವಿಡ್-19 ಎರಡನೇ ಹಂತದಲ್ಲಿ ಬೆಂಗಳೂರು ನಗರದಲ್ಲೇ ಪ್ರತಿನಿತ್ಯ 26,000 ಮಂದಿ ಸೋಂಕಿಗೆ ಒಳಪಟ್ಟಿದ್ದರು.

# ಹಿಂದೂ ಸಂಘಟನೆಯೇ ಪರಿಹಾರ

**(5ನೇ ಪುಟದಿಂದ)** ಕ್ಷೇತ್ರಗಳಲ್ಲಿ ಸಂಘಟನೆ ಕಾರ್ಯ ನಿರ್ವಹಿಸುತ್ತಿದ್ದು, ಸಮಾಜದ ಪರಿವರ್ತನೆ ಮಾಡುವ ಕೆಲಸ ಮಾಡುತ್ತಿದೆ. ವ್ಯಕ್ತಿ ನಿರ್ಮಾಣ, ಗ್ರಾಮ ವಿಕಾಸ, ಕುಟುಂಬ ಸಾಮರಸ್ಯ, ಭಾವೈಕ್ಯ ಜಾಗೃತಿ ಹೀಗೆ ಹತ್ತು ಹಲವಾರು ಕೆಲಸ ಮಾಡುತ್ತಿದೆ. ಆದಾಗ್ಯೂ ಸಮಸ್ಯೆಗಳು ಇನ್ನೂ ಜೀವಂತವಾಗಿವೆ. ಇದಕ್ಕೆ ಹಿಂದೂ ಸಂಘಟನೆಯೊಂದೇ ಪರಿಹಾರ ಎಂದರು.

ಮುಂದಿನ ನಾಲ್ಕು ವರ್ಷಗಳ ನಂತರ ಆರ್.ಎಸ್.ಎಸ್.ಗೆ 100 ವರ್ಷಗಳು ತುಂಬುತ್ತವೆ. ಈ ಹಿನ್ನೆಲೆಯಲ್ಲಿ ಧರ್ಮದ ಸಂರಕ್ಷಣೆ ಮೂಲಕ ರಾಷ್ಟ್ರವನ್ನು ಪರಮ ವೈಭವ ಸ್ಥಿತಿಗೆ ಕೊಂಡೊಯ್ಯುವ ಗುರಿ ಹೊಂದಬೇಕಿದೆ ಎಂದು ಹೇಳಿದರು.

ಗೃಹಸ್ಥರು, ವಿದ್ಯಾರ್ಥಿಗಳು, ವ್ಯಾಪಾರಿಗಳು, ಕೃಷಿಕರು ಎರಡು ವರ್ಷಗಳ ಕಾಲ ತಮ್ಮ ಸಮಯವನ್ನು ಹೊಂದಾಣಿಕೆ ಮಾಡಿಕೊಂಡು ಸಂಘಕ್ಕಾಗಿ ನೀಡಿ, ಸಂಘದ ವಿಸ್ತಾರಕರಾಗಿ ಕಾರ್ಯ ನಿರ್ವಹಿಸಿ, ಪರಮ ವೈಭವದ ಗುರಿಯನ್ನು ನಮ್ಮ ಕಣ್ಣೆದುರೇ ಕಾಣಲು ಸಂಕಲ್ಪ ಮಾಡಬೇಕು ಎಂದು ಕರೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ವಾಯುಪಡೆಯ ನಿವೃತ್ತ ಸೇನಾಧಿಕಾರಿ ರಾಮಚಂದ್ರಪ್ಪ ಮಾತನಾಡುತ್ತಾ, ಸರ್ವರೂ ಸುಖ-ಶಾಂತಿಯಿಂದ ಒಗ್ಗೂಡಿ ಜೀವನ ಮಾಡಬೇಕು ಎಂದು ಪುರಾತನ ಕಾಲದಿಂದಲೂ ಹಿಂದೂ ಧರ್ಮದಲ್ಲಿ ಹೇಳಲಾಗಿದೆ. ಆದರೆ ಕೆಲ ದುಷ್ಟ ಶಕ್ತಿಗಳು ಶಾಂತಿ ಕದಡುವ ಕೆಲಸ ಮಾಡುತ್ತಿವೆ. ಎಲ್ಲರೂ ಸಂಘಟಿತರಾಗಿ ಹಿಂದೂ ಶಕ್ತಿ ತೋರಿಸುವ ಕಾಲ ಕೂಡಿ ಬಂದಿದೆ ಎಂದರು.

ನಗರ ಸಂಚಾಲಕ ಜಯರುದ್ರೇಶ್, ಶಿವಮೊಗ್ಗ ವಿಭಾಗದ ಸಂಘ ಸಂಚಾಲಕ ಉಮಾಪತಿ ಉಪಸ್ಥಿತರಿದ್ದರು. ಇದಕ್ಕೂ ಮುನ್ನ ನಡೆದ ಪಥ ಸಂಚಲನದಲ್ಲಿ ಮೇಯರ್ ಎಸ್.ಟಿ. ವೀರೇಶ್, ಮಾಜಿ ಮೇಯರ್ ಬಿ.ಜಿ., ಅಜಯ್ ಕುಮಾರ್, ಸದಸ್ಯ ಕೆ.ಎಂ. ವೀರೇಶ್, ಮಾಜಿ ಸದಸ್ಯ ಶಿವನಗೌಡ ಟಿ. ಪಾಟೀಲ್, ಮುಖಂಡರಾದ ಶಂಕರನಾರಾಯಣ, ಶಂಭುಲಿಂಗಪ್ಪ ಇತರರು ಪಾಲ್ಗೊಂಡಿದ್ದರು.

# ಜಲಕ್ಷಾಮ ಎದುರಿಸಬೇಕಾದೀತು

**(5ನೇ ಪುಟದಿಂದ)** ಗಂಡಾಂತರದ ಜೊತೆಗೆ ಜಗತ್ತು ನಾಶವಾದರೂ ಅಚ್ಚರಿ ಪಡಬೇಕಿಲ್ಲ ಎಂದು ಮುನ್ನೆಚ್ಚರಿಸಿದರು.

ಪ್ರಸ್ತುತ ಶೇ.93ರಷ್ಟು ನೀರಿನಲ್ಲಿ ಉಪ್ಪು ಲಭ್ಯವಿದ್ದು, ಶೇ.7ರಷ್ಟು ಮಾತ್ರ ಸಿಹಿ ನೀರಿದೆ. ಈ ಸಿಹಿ ನೀರಿನಲ್ಲಿ ಕೇವಲ ಶೇ.0.12ರಷ್ಟು ನೀರು ಉಪಯೋಗವಾಗುತ್ತಿದೆ. ಇದರಲ್ಲಿ ಶೇ.8ರಷ್ಟು ನೀರು ಪೋಲಾಗುತ್ತಿದೆ. ಇದನ್ನು ತಡೆಯಬೇಕಾದದ್ದು ನಮ್ಮೆಲ್ಲರ ಜವಾಬ್ದಾರಿ ಎಂದು ಸಲಹೆ ನೀಡಿದರು.

ಭಾರತಕ್ಕೆ ಸ್ವಾತಂತ್ರ್ಯ ಬಂದ ಸಂದರ್ಭದಲ್ಲಿ ದೇಶದಲ್ಲಿ ಒಬ್ಬ ವ್ಯಕ್ತಿಗೆ 5 ಸಾವಿರ ಘನ ಮೀಟರ್ ನೀರು ಲಭ್ಯವಿತ್ತು. ಆದರೆ, ಈಗ 1500 ಘನ ಮೀಟರ್ ಸಿಗಲಿದೆ. ಇದು 1 ಸಾವಿರ ಘನ ಲೀಟರ್‌ಗೆ ಕುಸಿದರೆ ಜಲ ಗಂಡಾಂತರ ಕಾಡಲಿದೆ ಎಂದರು.

ಬೆಂಗಳೂರಿನ ಗಾಂಧಿ ವಿಶ್ವವಿದ್ಯಾಲಯದ ಪ್ರೊ. ಅರಣಿ ಕುಮಾರ್ ಅವರು 'ಕಬ್ಬಿನಿಂದ ಎಥೆನಾಲ್ ಉತ್ಪಾದನೆ ಮತ್ತು ಬಳಕೆ' ಕುರಿತ ವಿಷಯ ಮಂಡಿಸಿದರು.

ರಾಜ್ಯದ ಕಬ್ಬು ಬೆಳೆಗಾರರ ಸಂಘದ ಮುಖಂಡ ತೇಜಸ್ವಿ ಪಟೇಲ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ್ ಚಿಂತಾಲ್ ಸೇರಿದಂತೆ, ಇತರರು ಇದ್ದರು.

# ಉಪಚುನಾವಣೆ : ಭವಿಷ್ಯದ ದಿಕ್ಸೂಚಿ



ದಿನೇಶ್ ಕೆ ಶೆಟ್ಟಿ

ದಾವಣಗೆರೆ, ನ.2- ಕಾಂಗ್ರೆಸ್ ಪಕ್ಷದ ವತಿಯಿಂದ ಪಾಲಿಕೆ ಆವರಣದಲ್ಲಿ ಹಾನಗಲ್ ಉಪಚುನಾವಣೆ ಫಲಿತಾಂಶದ ಗೆಲುವಿನ ವಿಜಯೋತ್ಸವ ಆಚರಿಸಲಾಯಿತು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ಮಾತನಾಡಿ, ಸಿಂಧಗಿ ಉಪ ಚುನಾವಣಾ ಫಲಿತಾಂಶ ಭವಿಷ್ಯದ ದಿಕ್ಸೂಚಿಯಾಗಿದ್ದು, 2023ರ ವಿಧಾನ ಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ನಿಶ್ಚಿತವಾಗಿ ಅಧಿಕಾರ ಹಿಡಿಯಲಿದೆ. ಹಾನಗಲ್ ಕ್ಷೇತ್ರದಲ್ಲಿ ಪಕ್ಷ ಜಯಭೇರಿ ಗಳಿಸಿದ್ದು ಸಿಂಧಗಿ ಕ್ಷೇತ್ರದಲ್ಲಿ ನಮ್ಮ ಮತಗಳಿಕೆ 22 ಸಾವಿರದಿಂದ 62 ಸಾವಿರಕ್ಕೆ ಏರಿಕೆಯಾಗಿದೆ ಎಂದರು. ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಬೆಲೆ ಏರಿಕೆಯಿಂದ ಜನರು ತತ್ತರಿಸಿದ್ದು, ಫಲಿತಾಂಶ ಅದಕ್ಕೆ ಸಾಕ್ಷಿ ಎಂದು ತಿಳಿಸಿದರು.

ವಿಪಕ್ಷ ನಾಯಕ ನಾಗರಾಜ್, ಹಾನಗಲ್ ವೀಕ್ಷಕ ಗಡಿ ಗುಡಾಳ್ ಮಂಜುನಾಥ್, ಪಾಲಿಕೆ ಸದಸ್ಯ ಜೆ.ಎನ್. ಶ್ರೀನಿವಾಸ್, ವಿನಾಯಕ ಪೈಲ್ವಾನ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಜಿ. ಶಿವಕುಮಾರ್, ಮುಖಂಡ ಹುಲ್ಮನಿ ಗಣೇಶ್ ಹಾಗೂ ಆಶಾ ಗಣೇಶ್, ಸಾಗರ್ ಭಾಗವಹಿಸಿದ್ದರು.


## ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ **ಶ್ರೀಮತಿ ವಿನುತ ಕೋಂ ಲೇಟ್ ಡಿ. ಚಂದ್ರಶೇಖರ** ವಾಸ: # 212/2, ನರಸರಾಜ ರಸ್ತೆ, ದಾವಣಗೆರೆ ಇವರ ಪರವಾಗಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ:
ನನ್ನ ಕಕ್ಷಿದಾರರಿಗೆ ಕೆಳಕಂಡ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ ಇವರಲ್ಲಿ ಓ.ಎಸ್.ನಂ. 72/2008 ರಲ್ಲಿ ಆದ ಜಡ್ಜ್‌ಮೆಂಟ್ ಮತ್ತು ಡಿಕ್ರಿಯಂತೆ ಕೆಳಕಂಡ ಸ್ವತ್ತಿನಲ್ಲಿ ಹಾಗೂ ಇತರೆ ದಾವಾ ಷೆಡ್ಯೂಲ್ ಸ್ವತ್ತುಗಳಲ್ಲಿ 1/5ನೇ ಭಾಗದ ಹಿಸ್ಸೆಯನ್ನು ಹೊಂದಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಸದರಿ ದಾವೆಯ ಪ್ರಾಥಮಿಕ ಡಿಕ್ರಿಯಂತೆ ಅಂತಿಮ ಡಿಕ್ರಿಯನ್ನು ಕೋರಿ ಮಾನ್ಯ 1ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ ಇವರಲ್ಲಿ ಎಫ್.ಡಿ.ಪಿ ನಂ 21/2015 ರಂತೆ 1 ರಿಂದ 4ನೇ ಎದುರುದಾರರಾದ ಶ್ರೀಮತಿ ಗೀತಾ ಗೌಡ, ಶ್ರೀಮತಿ ಡಿ.ರೀತಾ, ಶ್ರೀಮತಿ ಡಿ.ಲತಾ ಮತ್ತು ಶ್ರೀ ಡಿ. ದಯಾನಂದ ಇವರುಗಳ ವಿರುದ್ಧ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ಅರ್ಜಿಯಾದ ಎಫ್.ಡಿ.ಪಿ ನಂ. 21/2015ರ ಅರ್ಜಿಯು ಇನ್ನು ಮಾನ್ಯ ಘನ ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿರುತ್ತದೆ. ಆದ್ದರಿಂದ ನನ್ನ ಕಕ್ಷಿದಾರರ ಪರ ನಾನು ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಮೇಲ್ಕಂಡ ನ್ಯಾಯಾಲಯದಲ್ಲಿ ಎಫ್.ಡಿ.ಪಿ. ನಂ 21/2015ರ ಅರ್ಜಿಯು ವಿಚಾರಣೆ ಹಂತದಲ್ಲಿರುವುದರಿಂದ ಷೆಡ್ಯೂಲ್ ಸ್ವತ್ತನ್ನು ಸಾರ್ವಜನಿಕರು ಕ್ರಯ, ಭೋಗ್ಯ, ಜಂಟಿ ಅಭಿವೃದ್ದಿ ಕರಾರುಪತ್ರ ಹಾಗೂ ವಗೈರೆ ಮಾಡಬಾರದೆಂದು ಈ ಮೂಲಕ ತಿಳಿಯಪಡಿಲಾಗಿದೆ. ಒಂದು ವೇಳೆ ಸಾರ್ವಜನಿಕರು ಷೆಡ್ಯೂಲ್ ಸ್ವತ್ತನ್ನು ಖರೀದಿಸಿದಲ್ಲಿ ನನ್ನ ಕಕ್ಷಿದಾರ ಹಕ್ಕಿಗೆ ಯಾವುದೇ ರೀತಿಯಲ್ಲಿ ಬಾಧಕವಾಗುವುದಿಲ್ಲ ಹಾಗೂ ಮುಂದೆ ಆಗುವ ಎಲ್ಲಾ ತೊಂದರೆಗಳಿಗೆ ನೀವೇ ಜವಾಬ್ದಾರರಾಗಿರುತ್ತೀರಿ ತಿಳಿಯಿರಿ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

**ಷೆಡ್ಯೂಲ್**

ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ನಾಗನೂರು ಗ್ರಾಮದ ಸ.ನಂ 136 ರಲ್ಲಿ ವಿಸ್ತೀರ್ಣ 07 ಎಕರೆ, 22 ಗುಂಟೆ ಜಮೀನಿನ ಸ್ವತ್ತಿಗೆ ಚಕ್ಕುಬಂದಿ: ಪೂರ್ವಕ್ಕೆ: ಬೂದಿಹಾಳ ಹನುಮಂತಪ್ಪ ಇವರ ಜಮೀನು, ಪಶ್ಚಿಮ : ಬಕ್ಕಪ್ಪ ಇವರ ಸ್ವತ್ತು ಉತ್ತರಕ್ಕೆ : ಶಾಮನೂರು ಗ್ರಾಮದ ಗಡಿ, ದಕ್ಷಿಣಕ್ಕೆ : ರುದ್ರಪ್ಪ ಇವರ ಸ್ವತ್ತು.

**ಹೆಚ್.ವಿ ರಾಮದಾಸ್,** ಬಿ.ಕಾಂ., ಎಲ್‌ಎಲ್.ಬಿ, ವಕೀಲರು
**ಎಂ.ಎಸ್ ರಾಜಕುಮಾರ್** ಬಿ.ಎ, ಎಲ್‌ಎಲ್.ಬಿ, ವಕೀಲರು.
ವಿಳಾಸ: # 64 'ಸದ್ಗುರು' ಅಕ್ಕಮಹಾದೇವಿ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-2
**ಮೊ: ನಂ: 98860 22144**

## ಸಾರ್ವಜನಿಕ ಪ್ರಕಟಣಾ ನೋಟೀಸ್

ನನ್ನ ಕಕ್ಷಿದಾರರಾದ **ಶ್ರೀ ಪೂರನ್ ಸಿಂಗ್ ತಂದೆ ದೇವಿಸಿಂಗ್** ಮನೆ ನಂ.116/29, ಕಿರುವಾಡಿ ಲೇಔಟ್, ಕೆ.ಬಿ. ಬಡಾವಣೆ ದಾವಣಗೆರೆ ಸಿಟಿ ಇವರು ನೀಡಿದ ದಾಖಲೆ ಮತ್ತು ಮಾಹಿತಿ ಆಧಾರದ ಮೇಲೆ ಸಾರ್ವಜನಿಕ ನೀಡುವುದೇನೆಂದರೆ,
ಈ ನೋಟಿಸಿನ ಷೆಡ್ಯೂಲ್‌ನಲ್ಲಿ ವಿವರಿಸಿದ ಸೊತ್ತನ್ನು ದಾವಣಗೆರೆ ತಾ|| ಜಿ|| ಶಾಮನೂರು ಗ್ರಾಮದ ವಾಸಿಯಾದ **ಕೆ.ಎಸ್. ರಾಜು ತಂದೆ ಕರೇಗೌಡರ ಸದಾಶಿವಪ್ಪ** ಇವರಿಂದ ಶುದ್ಧ ಕ್ರಯಕ್ಕೆ ಖರೀದಿಸಲು ಇಚ್ಛಿಸಿರುತ್ತಾರೆ. ಈ ಬಗ್ಗೆ ವ್ಯವಹಾರದ ಮಾತುಕತೆ ನಡೆದಿರುತ್ತದೆ. ಆದ್ದರಿಂದ ಷೆಡ್ಯೂಲ್ ಸೊತ್ತಿನ ಕ್ರಯದ ಖರೀದಿ ಬಗ್ಗೆ ಯಾರಾದರೂ ರೀತಿಯ ತಂಟೆ-ತಕರಾರು, ವ್ಯಾಜ್ಯ ಆಕ್ಷೇಪಣೆ ಅಥವಾ ಇನ್ನಾವುದೇ ರೀತಿಯ ಆಕ್ಷೇಪಣೆ ಇದ್ದಲ್ಲಿ ಅವುಗಳನ್ನು ಈ ಪ್ರಕಟಣೆ ಪ್ರಕಟವಾದ 07 ದಿನಗಳೊಳಗಾಗಿ ಈ ಕೆಳಕಂಡ ವಕೀಲರ ವಿಳಾಸಕ್ಕೆ ಅಥವಾ ನನ್ನ ಕಕ್ಷಿದಾರರ ವಿಳಾಸಕ್ಕೆ ಸೂಕ್ತ ದಾಖಲಾತಿಗಳು ಹಾಗೂ ಸಾಕ್ಷಗಳೊಂದಿಗೆ ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ಈ ಬಗ್ಗೆ ಯಾರದೂ, ಯಾವ ರೀತಿಯ ತಂಟೆ-ತಕರಾರು ಅಥವಾ ವ್ಯಾಜ್ಯ ಇಲ್ಲವೆಂದು ಭಾವಿಸಿ, ನನ್ನ ಕಕ್ಷಿದಾರರು **ಕೆ.ಎಸ್. ರಾಜು ತಂದೆ ಕರೇಗೌಡರ ಸದಾಶಿವಪ್ಪ** ಇವರೊಂದಿಗೆ ಕ್ರಯದ ವ್ಯವಹಾರವನ್ನು ಸೂಕ್ತ ರಿಜಿಸ್ಟರ್ ಕ್ರಯಪತ್ರಗಳನ್ನು ಪಡೆಯುವುದರ ಮೂಲಕ ಷೆಡ್ಯೂಲ್ ಸೊತ್ತನ್ನು ಕ್ರಯಕ್ಕೆ ಪಡೆಯುತ್ತಾರೆ. ಈ ಬಗ್ಗೆ ಯಾರದ್ದೇ ತಂಟೆ-ತಕರಾರು ಮೇಲ್ಕಂಡ 07 ದಿನಗಳ ಅವಧಿಯ ನಂತರದಲ್ಲಿ ಬಂದಲ್ಲಿ ಅವುಗಳನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಆ ರೀತಿಯ ಯಾವುದೇ ತಂಟೆ-ತಕರಾರು, ವ್ಯಾಜ್ಯಗಳು ನನ್ನ ಕಕ್ಷಿದಾರರನ್ನು ಪ್ರತಿಬಂಧಿಸುವುದಿಲ್ಲ ಎಂದು ಪ್ರಚುರಪಡಿಸಿದ ಸಾರ್ವಜನಿಕ ಪ್ರಕಟಣೆಗೆ ಒಳಪಟ್ಟಿರುತ್ತದೆ.

**ಷೆಡ್ಯೂಲ್**

ದಾವಣಗೆರೆ ಸಬ್ ರಿಜಿಸ್ಟರ್ ಆಫೀಸಿನ ಅಧಿಕಾರಕ್ಕೆ ಒಳಪಟ್ಟ ದಾವಣಗೆರೆ ಸಿಟಿ, ಡಾಲರ್ಸ್ ಕಾಲೋನಿ ದಾವಣಗೆರೆ ಗ್ರಾಮದ ರಿ.ಸರ್ವೆ ನಂ.268/11 ರಲ್ಲಿ ವಿಂಗಡಿಸಿರುವ ಸೈಟ್‌ಗಳ ಪೈಕಿ ಸೈಟ್ ನಂ.09 ಇದರ ಅಳತೆ 30x40 ಅಡಿ ಮತ್ತು ಸೈಟ್ ನಂ.10 ಇದರ ಅಳತೆ 30x40 ಅಡಿ ಈ ಎರಡೂ ಸೈಟ್‌ಗಳು ಒಂದಕ್ಕೊಂದು ಲಗತ್ತಿದ್ದು, ಒಟ್ಟಿಗೆ ಚಕ್ಕುಬಂದಿ: **ಪೂರ್ವಕ್ಕೆ**: ಸೈಟ್ ನಂ.08, **ಪಶ್ಚಿಮಕ್ಕೆ**: ಸೈಟ್ ನಂ. 11, **ಉತ್ತರಕ್ಕೆ**: 9.00 ಮೀಟರ್ ಅಗಲದ ರಸ್ತೆ, **ದಕ್ಷಿಣಕ್ಕೆ**: ರಿ. ಸರ್ವೆ ನಂ. 268 ರ ಜಮೀನು.

ಕಕ್ಷಿದಾರರು: **ಪೂರಾನ್ ಸಿಂಗ್**
ಕಕ್ಷಿದಾರರ ಪರ ವಕೀಲರು: **ಯೋಗೇಶ್ವರಪ್ಪ ಆರ್.** ಬಿ.ಎ., ಎಲ್‌ಎಲ್‌ಬಿ, ವಕೀಲರು, ನಂ. 705/2, 1ನೇ ಮೇನ್, 10ನೇ ಕ್ರಾಸ್, ಕೆ.ಬಿ. ಬಡಾವಣೆ, ದಾವಣಗೆರೆ. **ಮೊ: 95384 41489**

## ದಾವಣಗೆರೆ ಸ್ಮಾರ್ಟ್ ಸಿಟಿ ಲಿಮಿಟೆಡ್.

Smart City
Plot No.77, Zilladalitha Bhavana Office Premises,
Karur Industrial Area, Old P.B. Road, Davanagere-577006
Tel-08192-222383, CIN: U74999KA2016PLC093411,
davanageresmartcity.mrc.gov.in, smartcitydavanagere@gmail.com

No: DSCL/EE/CR-04/2020-21/1488 Dt: 22.10.2021

**Expression of Interest**

**Name of Project: Old City Bus Stand Redevelopment. EOI for "Planning, designing, Engineering, Manufacturing, supply, installation, testing, commissioning, operation and maintenance for 5 years, and handing over of the complete system of the escalators (4Nos) using latest state of art technology and related civil work, electromechanical, automation works, Control panel etc., complete on turnkey basis at Old City Bus Stand, Davanagere" has been invited by DSCL.** Interested parties can submit their EOI through web site of http://eprocurement.kar.nic.in from 22nd October 2021 to 12th November 2021 up to 4.30 PM.

**Tender Number : UDD/DSCL/CR-04/2018-19.**

In case of any queries / clarifications on the project / documents please contact DSCL during office hours.

Sd/- Executive Engineer, DSCL, Dvg.
Sd/- Managing Director and Chief Executive Officer, DSCL, Davanagere

ವಾಸಾಇ/ದಾವಣಗೆರೆ/482/ಎಂಸಿಎ/2021–22

## IN THE COURT OF HON'BLE ADDITIONAL CIVIL JUDGE AT DAVANGERE.

**EXECUTION PETITION NO. 72/2019**

Decree-Holder : Smt. Bhaghyalaxmi, W/o Sri. K.S. Krishnoji Rao, R/o Rajaji Nagar, Birur Town, Kadur Taluk, Chikkamangalur Dist.

Represented by her SPA Holder by name Sri. Vinay Kumar K. S/o Sri. K.S. Krishnoji Rao, Aged about 48 years, Occupation, Computer Coaching, R/o. Rajaji Nagar, Birur Town, Kadur Taluk, Chikkamagalur Dist.,

V/s. Judgement - Debtor : Sri. G.S. Rajappa

**CAUSE - NOTICE TO THE JUDGEMENT - DEBTOR**

**JUDGEMENT-DEBTOR :** Sri G.S. Rajappa, S/o Sri Shankarappa, Aged about 61 years, Retd Syndicate bank Employee, R/o Door No. 1250/16, ward No 34, 2nd main, 8th cross, near Maganur Basappa school, Taralabalu extension, Near Vidya Nagar, Davangere city.

**WHEREAS,** The Decree-Holder has filed the above Execution Petition for seeking the relief of Executing the Judgement and Decree in O.S. No. 445/1987 dated. 12.08.1994 and RSA No. 1154/2004 dated. 15.06.2007 and other Reliefs against the JDR. The Cause Notice of the above execution Petition was not served on the JDR, Which was sent through court as well as RPAD. But you Purposefully evaded the same. Hence, this advertisement in newspaper.


**THROUGH** This paper publication you are hereby called upon to attend the court on 23.11.2021 at 11.00 am by personally or duly authorized advocate to answer the above said Execution petition. In Default of your appearance the day and time, the petition will be heard and determined in your absence.

Given under my hand and the seal of the court on this the 2nd day November 2021

**Advocates for Decree-Holder**
**Timmalapurada Ravi Shankar**
Advocates, Ph. : 9141419386,
TAS Law Associates, Davangere.

**Chief Ministerial Office**
Civil Judge Court
Davangere.

## ಸಕಲರ ಲೇಸ ಬಯಸುವುದೇ ನಿಜ ಧರ್ಮ: ಪಂಡಿತಾರಾಧ್ಯ ಶ್ರೀ



ಸಾಣೇಹಳ್ಳಿ, ನ.2- ಶುಭ, ಒಳಿತು, ಲೇಸು, ಮಂಗಳ ಯಾವುದೇ ಒಂದು ಜಾತಿ, ಮತ, ಪಂಥ, ಧರ್ಮಕ್ಕೆ ಸೀಮಿತವಾಗದೇ ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವುದೇ ನಿಜ ಧರ್ಮ. ಈ ತತ್ವ, ಸಿದ್ಧಾಂತಗಳ ಹಿನ್ನೆಲೆಯಲ್ಲಿ ನಾಟಕೋತ್ಸವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ನುಡಿದರು.


ಸಾಣೇಹಳ್ಳಿಯಲ್ಲಿ ರಾಷ್ಟ್ರೀಯ ನಾಟಕೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ ಶಿವ ಧ್ವಜಾರೋಹಣ ನೆರವೇರಿಸಿ, ನಂತರ ಚಿಂತನಗೋಷ್ಠಿಯಲ್ಲಿ ಅವರು ಮಾತನಾಡಿದರು.

ಜಗತ್ತಿನಲ್ಲಿ ಅನೇಕ ಧರ್ಮಗಳಿವೆ. ಆ ಎಲ್ಲಾ ಧರ್ಮಗಳ ಅಂತಿಮ ಗುರಿ ಸಕಲ ಜೀವಾತ್ಮರಿಗೆ ಒಳಿತನ್ನು ಬಯಸುವುದಾಗಿದೆ. ನಡೆ, ನುಡಿ ಒಂದಾಗುವುದೇ ಧರ್ಮ. ಹಿಂಸೆ, ಮೋಸ, ವಂಚನೆಯನ್ನು ಮಾಡದೆ ತನ್ನಂತೆ ಪರರ ಬಗೆದೊಡೆ ಅದುವೇ ಧರ್ಮ ಎಂದರು.

ತನ್ನರಿವೇ ತನಗೆ ಗುರುವಾಗಬೇಕು. ದಯೆ, ಪ್ರೀತಿ, ಸತ್ಯ, ಕರುಣೆಗಳೆಂಬ ಮೌಲ್ಯಗಳೆಲ್ಲವೂ ನಮ್ಮೊಳಗಿವೆ. ಬಾಹ್ಯ ಸಂಪತ್ತಿಗೆ ಜೋತು ಬೀಳದೆ, ಒಳಗಿನ ಜ್ಞಾನವೆಂಬ ಸಂಪತ್ತಿಗೆ ಮಾರು ಹೋಗಬೇಕೆಂದರು.

ಕನ್ನಡ ಧ್ವಜಾರೋಹಣ ನೆರವೇರಿಸಿದ ಶಿವಮೊಗ್ಗ ಬಸವ ಕೇಂದ್ರದ ಡಾ. ಮರುಳಸಿದ್ಧ ಸ್ವಾಮೀಜಿ ಮಾತನಾಡಿ, ಕನ್ನಡಿಗರು ಕೇವಲ ನವೆಂಬರ್ ಕನ್ನಡಿಗರಾಗುತ್ತಿರುವುದು, ಬೀದಿ ಬೀದಿಗಳಲ್ಲಿ ಕುಣಿದು ಕುಪ್ಪಳಿಸಲು ಮಾತ್ರ ಸೀಮಿತಗೊಂಡಿರುವುದು ದುರದೃಷ್ಟಕರ ಸಂಗತಿ. ಕನ್ನಡಿಗರು ನಿರಭಿಮಾನಿಗಳು ಎನ್ನುವ ಮಾತನ್ನು ಸುಳ್ಳು ಮಾಡಬೇಕಾಗಿದೆ. ತಮಿಳರ ಭಾಷಾ ಪ್ರೇಮ ಕನ್ನಡಿಗರಿಗೆ ಅನುಕರಣೀಯವಾಗಬೇಕೆಂದರು.

## ಅವೈಜ್ಞಾನಿಕ ಸೇತುವೆ ನಿರ್ಮಾಣ ರೈತರಿಂದ ಪ್ರತಿಭಟನೆ



ರಾಣೇಬೆನ್ನೂರು

ರಾಣೇಬೆನ್ನೂರು, ನ.2- ಪಟ್ಟಣದ ದೇವರಗುಡ್ಡ ರಸ್ತೆಯ ಅವೈಜ್ಞಾನಿಕವಾಗಿ ನಿರ್ಮಾಣಗೊಂಡ ರೈಲ್ವೇ ಅಂಡರ್ ಬ್ರಿಡ್ಜ್‌ನಲ್ಲಿ ನಲ್ಲಿ ನೀರು ನಿಂತಿದ್ದು, ಇಂದು ಹೂವಿನಹಡಗಲಿ ತಾ. ಹಿರೇಬನ್ನಿಮಟ್ಟಿ ರೈತ ದೇವರಾಜ ದೊಡ್ಮನಿ ಅವರ ಮೆಕ್ಕೆಜೋಳ ಹೇರಿದ ಟ್ರ್ಯಾಕ್ಟರ್ ಉರುಳಿದ ಘಟನೆ ನಡೆದಿದೆ.

ಸುಮಾರು 70 ಕ್ವಿಂಟಾಲ್ ಮೆಕ್ಕೆಜೋಳ ನೀರು ಪಾಲಾಗಿದ್ದು, ಸುದ್ದಿ ತಿಳಿದ ರೈತ ಮುಖಂಡರು ಸುಮಾರು 4 ತಾಸು ಪ್ರತಿಭಟಿಸಿ ರೈತನಿಗೆ ಪರಿಹಾರ ಕೊಡುವಂತೆ ಒತ್ತಾಯಿಸಿದರು. ಇಂತಹ ಘಟನೆಗಳು ಪದೇ ಪದೇ ನಡೆಯುತ್ತಿದ್ದು, ಮೇಲು ಸೇತುವೆ ಮಾಡುವಂತೆ ಸಾರ್ವಜನಿಕರು, ರೈತರು ಅನೇಕ ಸಾರಿ ಪ್ರತಿಭಟನೆ ಮಾಡಿದರೂ ಸಹ ಜನರ ಬೇಡಿಕೆಗೆ ಸ್ಪಂದಿಸದ ಸಂಸದ ಶಿವಕುಮಾರ ಉದಾಸಿ ಹಾಗೂ ರೈಲ್ವೇ ಇಲಾಖೆ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತವಾಗಿದೆ.

ಎಪಿಎಂಸಿ ಅಧ್ಯಕ್ಷ ಬಸವರಾಜ ಸವಣೂರ, ನಗರಸಭೆ ಪೌರಾಯುಕ್ತ ಉದಯಕುಮಾರ್, ಎಸ್.ಐ. ನಾಗರಾಜ ಅವರು ರೈತ ಮುಖಂಡರಾದ ರವಿ ಪಾಟೀಲ, ಬಸವರಾಜ ಕೊಂಗಿ, ಮಂಜುನಾಥ ಗೌಡ ಶಿವಣ್ಣನವರ, ಜಗದೀಶ ಕೆರೂಡಿ ಇನ್ನಿತರರೊಂದಿಗೆ ಸಮಾಲೋಚನೆ ನಡೆಸಿ, ರೈತನಿಗೆ ಪರಿಹಾರ ಕೊಡಿಸುವ ಭರವಸೆ ನೀಡಿದರು.


## ಹರಿಹರ : 5 ರಂದು ಗ್ರಾಮ ದೇವತೆ ಹಬ್ಬದ ಸಭೆ



ಹರಿಹರ, ನ.2- 66 ಹಳ್ಳಿಯ ಒಡತಿ ಗ್ರಾಮದೇವತೆ ಶ್ರೀ ಊರಮ್ಮ ದೇವಿಯ ಹಬ್ಬದ ಆಚರಣೆ ಅಂಗವಾಗಿ ನ.5ರ ಶುಕ್ರವಾರ ಬೆಳಗ್ಗೆ 11 ಗಂಟೆಗೆ ಶಿಬಾರ ಸರ್ಕಲ್ ಹತ್ತಿರ ಇರುವ ಕಸಬಾ ಗ್ರಾಮದೇವತೆ ದೇವಸ್ಥಾನದ ಆವರಣದಲ್ಲಿ ಪೂರ್ವಭಾವಿ ಸಭೆಯನ್ನು ಆಯೋಜಿಸಲಾಗಿದೆ. ನಗರದ ನಾಗರಿಕರು ಸಭೆಗೆ ಆಗಮಿಸಿ ಸಲಹೆ, ಸೂಚನೆಗಳನ್ನು ನೀಡಬೇಕೆಂದು ಕಸಬಾ ಗ್ರಾಮದ ಗೌಡ್ರು ಲಿಂಗರಾಜ್ ಪಾಟೀಲ್ ಮತ್ತು ಮಾಜೇನಹಳ್ಳಿ ಗೌಡ್ರು ಚನ್ನಬಸಪ್ಪ ಹಳ್ಳದಕೇರಿ ಮತ್ತು ಶಾನುಭೋಗರು ತಿಳಿಸಿದ್ದಾರೆ.

## ಖಾದ್ಯ ತೈಲ ಕಂಪನಿಗಳಿಂದ ಬೆಲೆ ಇಳಿಕೆ

ನವದೆಹಲಿ, ನ. 2 – ಅದಾನಿ ವಿಲ್ಮರ್ ಹಾಗೂ ರುಚಿ ಸೋಯಾ ಸೇರಿದಂತೆ ಪ್ರಮುಖ ಖಾದ್ಯ ತೈಲ ಕಂಪನಿಗಳು ತಮ್ಮ ಸಗಟು ತೈಲ ಬೆಲೆಯನ್ನು ಲೀಟರ್‌ಗೆ 4-7 ರೂ. ಗಳಷ್ಟು ಇಳಿಸುವುದಾಗಿ ತಿಳಿಸಿವೆ. ಉಳಿದ ಕಂಪನಿಗಳೂ ಸಹ ಬೆಲೆ ಇಳಿಕೆ ಮಾಡುವ ನಿರೀಕ್ಷೆ ಇದೆ ಎದು ಔದ್ಯಮಿಕ ಸಂಸ್ಥೆಯಾದ ಸಾಲ್ವೆಂಟ್ ಎಕ್ಸ್‌ಟ್ರಾಕ್ಟರ್ಸ್ ಅಸೋಸಿಯೇಷನ್ (ಎಸ್.ಇ.ಎ.) ತಿಳಿಸಿದೆ. ಜೆಮಿನಿ ಎಡಿಬಲ್ಸ್, ಮೋದಿ ನ್ಯಾಚುರಲ್ಸ್, ಗೋಕುಲ್ ರಿಫಾಯಲ್ಸ್ ಅಂಡ್ ಸಾಲ್ವೆಂಟ್, ವಿಜಯ್ ಸಾಲ್ವೆಕ್ಸ್ ಹಾಗೂ ಎನ್.ಕೆ. ಪ್ರೊಟೀನ್ಸ್ ಬೆಲೆ ಇಳಿಕೆ ಮಾಡಿರುವ ಇತರೆ ಕಂಪನಿಗಳಾಗಿವೆ.














JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte